## कुलपतीनां वचः

**प्रो. मल्लेपुरं जि. वेङ्कटेशः**



**अयि भोः महाजनाः,**

कर्णाटकसंस्कृतविश्वविद्यालयेन प्रथमवर्षीयाणि शैक्षणिककार्याणि साहित्यिककार्याणि च साधितानि । नूतनवर्षस्य शैक्षणिककार्याणि आरप्स्यन्ते । संस्कृतशिक्षणनिर्देशनालयेन शैक्षणिकव्यवस्था सुष्ठु क्रियमाणा वर्तते । पाठशालाशिक्षकेभ्यः पुनश्चेतनशिबिराणि सञ्चालितानि । आगामिनि वर्षेऽपि ईदृशानि शिबिराणि प्रचलिष्यन्ति । २०१२–१३तमवर्षस्य प्राशासनिकमण्डल्याः पाठशालामुख्यशिक्षकाणां च समावेशं कृत्वा शिक्षणाभिवृद्धिविषये प्रशासनसुव्यवस्थायाः च विषये चिन्तनं प्रचलति । एतावता एव धारवाड–मैसूरु–चित्रदुर्गनगरेषु चिन्तनसमावेशाः प्रवृत्ताः । पाठशालानां प्रगतिः यदि सुष्ठु सम्पाद्यते तर्हि महाविद्यालयाः सुदृढाः भविष्यन्ति ।

कर्णाटकसंस्कृतविश्वविद्यालयेन शास्त्रग्रन्थानाम् अनुवादमाला आरब्धा अस्ति । महामहोपाध्यायानां ज्येष्ठविदुषां रङ्गनाथशर्मणां वाक्यपदीयकन्नडानुवादकृतिः प्रकाशिता वर्तते विश्वविद्यालयस्य प्रसाराङ्गद्वारा । अस्मिन् एव संवत्सरे महिमभट्टस्य व्यक्तिविवेकः, कुमारिलभट्टस्य श्लोकवार्तिकग्रन्थश्च कन्नडानुवादरूपेण प्रकाशितौ भविष्यतः । २०१०–११ तमवर्षस्य पुस्तकपुरस्कारयोजनाकार्यम् अन्तिमघट्टे वर्तते । विश्वविद्यालयस्य तादृशी काचित् प्रशासनसमितिः वर्तते, यस्यां समितौ दक्षाः निपुणाश्च विद्वांसः सन्ति । प्रशिक्षणपरिषदि सदस्यरूपेण समर्थाः विद्वांसः सन्ति । विश्वविद्यालयः प्रज्ञावतां संस्कृतविदुषां साहाय्येन आगामिशैक्षणिकवर्षे उत्तमकार्याणि कार्यक्रमान् च प्रचालयिष्यति । अहं सर्वेषां संस्कृतविदुषां कन्नडविदुषां च सूचनाः सहकारान् च सदा अभिलषामि ।

## सम्पादकीयम्

**डा ॥ नागरत्ना हेगडे**



**आत्मीयबन्धो,**

भारतीयानाम् आदर्शभूतग्रन्थेषु भगवद्गीता अपि अन्यतमा । भगवद्गीतायां ये विचाराः प्रतिपादिताः, ते विचाराः इदानीं सर्वत्र कर्णाटके प्रसार्यमाणाः प्रचार्यमाणाः सन्ति । सद्यःकाले अस्याः भगवद्गीतायाः विषये रशियादेशे जनेषु भिन्नाभिप्रायः उत्पन्नः । भगवद्गीता युद्धार्थं प्रेरयति, हिंसां च प्रचोदयति इति चिन्तनं निमित्तीकृत्य जनैः न्यायालये अभियोगः कृतः, गीतायाः निषेधाय आग्रहोऽपि अभियाचितः ।

किन्तु न ज्ञायते, भगवद्गीतायाः शक्तिरेव तादृशी स्यात्, तत्रत्यन्यायालयेन भगवद्गीतानिषेधः तिरस्कृतः, भगवद्गीतैव आदृता । अनेन संस्कृतस्य विश्वभाषात्वं पुनरपि प्रतिपादितम् । सन्निहिते मकर–सङ्क्रमणकाले विदेशीयैरपि भगवद्गीता आदृता इत्येतत् संस्कृतस्य भारतीयसंस्कृतेश्च शुभं सूचयति ।

सङ्क्रान्तिर्नववर्षं च नवां स्फूर्तिं नवां गतिम् ।
वितनोतु विशेषेण हर्षपूरं च मङ्गलम् ॥



# सन्देशः

**डा ॥ वा. रा. पञ्चमुखी,** एम्.ए., पिएच्.डि.
कुलाधिपतिः, श्रीगुरुसार्वभौमसंस्कृतविद्यापीठं, मन्त्रालयः
भूतपूर्वः कुलाधिपतिः, राष्ट्रियसंस्कृतविद्यापीठं, तिरुपतिः

कर्णाटकसंस्कृतविश्वविद्यालयः समुद्रमथनकाले उद्धूतम् अमृतं सुरेभ्यः इव समग्र-बुद्धिजीविभ्यः परमाप्यायनं सत् नूतनं परमानन्ददायकं चैतन्यं समुद्भावयन् एधते इति विषयमधिगम्य महान्तं सन्तोषम् अनुभवामि । विश्वविद्यालयस्य संस्थापनात्पूर्वं प्रचलितं विचारसमुद्रमथनं पौराणिकात् देवासुरसमुद्रमथनात् अत्यन्तं भिन्नमिति आख्यातुं शक्यते। देवासुरसमुद्रमथनात् हालाहलं तथा अमृतमिति भिन्नगुणयोः वस्तुनोः उद्भवनं सञ्जातं किल ? परम् अधुनातनविचारसागरमन्थनात् केवलम् अमृतं समुद्धूतमिति मे मतिः । आशासे यदिदम् अमृतं समग्रभाषासाहित्यस्य, भारतीयसंस्कृतेश्च पुनरुत्थापनार्थम् अमृतीकरणार्थं च अत्यन्तं फलकारि भविता इति ।

अस्य विश्वविद्यालयस्य स्थापनाविषये भूतपूर्वकर्णाटकराज्यपालानां महामहिमशालिनां श्री रामेश्वरठाकुरमहाभागानां योगदानं स्मर्तव्यमेव । अनेकसंस्कृतविदुषां सहकारेण विश्वविद्यालयस्य अधिनियमानां प्रथमस्तरीयसंहिता सज्जीकृता आसीत् इति सन्तोषेण स्मर्यते। कर्णाटकसंस्कृतविश्वविद्यालयः तस्य प्रथमकुलपतिस्थानमलङ्कुर्वाणानां संस्कृतकर्णाटकोभयभाषाप्रवीणानां, सात्त्विकहृदयानां प्रो. मल्लेपुरं जि. वेङ्कटेशमहाभागानां नेतृत्वे शीघ्रतमप्रगतिं साधयन् शोभते इत्ययम् अत्यन्तप्रमोदावहो विषयः । संस्कृतभाषायाः तथा च विशालसंस्कृतवाङ्मयस्य उपादेयताभिवृद्ध्यर्थं तत्र प्रतिपादिताः प्रौढविचाराः अर्थवत्प्रमेयाश्च अधुनातनसमाजस्य कल्याणसम्पादनाय कथम् उपकारकाः भवेयुः इत्यस्य प्रकाशनार्थम् अयं विश्वविद्यालयः नूतननूतनोपक्रमान् कल्पयतु, तथा च अयं विश्वविद्यालयः विश्वनामकपरमात्मनः आध्यात्मिकचिन्तनस्य आलयः भूयादिति आशास्य विरमामि ।

संस्कृताराधकः

**वा.रा. पञ्चमुखी**



# सन्देशः

कर्णाटकराज्ये इदंप्रथमतया संस्कृतविश्वविद्यालयः बेङ्गलूरुनगरे संस्थापितः समभवदिति तु प्रमोदस्य विषयः। प्रो. मल्लेपुरं. जि. वेङ्कटेशवर्यः श्रेष्ठः लेखकः, विमर्शकः, सम्पादकः, अधिकारी इति च बहुश्रुतोऽस्ति। एतादृशः क्रियाशीलः पुरुषः अस्य संस्कृतविश्वविद्यालयस्य प्रथमः कुलपतिरस्तीत्यपि हर्षदायको विषयः। पुरा नलन्दातक्षशिलाविश्वविद्यानिलयौ विश्वतः सर्वत्र ज्ञानप्रसाराय कृतभूरिपरिश्रमौ आस्ताम्। तद्वत् एषः संस्कृतविश्वविद्यालयः अस्य विश्वव्यापित्वेन संस्कृतभाषाप्रसारणाय क्रियाशीलो भवतु। प्राचीनवेदवेदाङ्गरामायण–महाभारतपुराणदर्शनादिवाङ्मयप्रभेदानां सम्यक्परिचयः जनानामवश्यं भवेत्। इदानीन्तनप्रपञ्चे वैज्ञानिकविषयाणामेव प्राथम्यं प्राशस्त्यञ्च वर्तते। पुरा भारते अनेके वैद्याः, गणितज्ञाः, खगोलज्ञाः, तान्त्रिकविषयज्ञाः, विज्ञानिनश्च आसन्। तैः प्रतिपादिताः तत्तद्विषयाः वेदादिसंस्कृत–वाङ्मयग्रन्थेषु सुनिबद्धास्सन्ति। तादृशजनानां परिचयः इदानीन्तनजनानां कृते अवश्यं भवेत्। अत एव अनेन संस्कृतविश्वविद्यालयेन प्राचीनाधुनिकज्ञानविज्ञानतौलनिकाध्ययनम् अध्यापनं च अवश्यं करणीयमेव। वैज्ञानिकप्रज्ञां प्राचीनज्ञानज्ञतां च संस्कृतविश्वविद्यालये कार्यं कुर्वन्तः संस्कृतसेवार्थं कटिबद्धाः संस्कृतज्ञाः कुशलिनः विद्वांसः संवर्धयेयुः। प्राचीनज्ञानविज्ञानसंस्कृतिपरम्पराः संस्कृतवार्तापत्रिकाद्वारा संवर्धयेयुः। आधुनिक–जनोपयोगिविषयैस्सह प्राचीनविषयानपि संयोज्य जनान् प्रति संस्कृतभाषाचतुराः विदग्धाः कोविदाः उपदिशन्तु। विश्वमैत्री विश्वस्नेहः च संस्कृतज्ञेषु दृढो भवतु। तथा संस्कृत–विश्वविद्यालयस्य महाजनाः प्रयतन्तामित्याशासे। वर्धताम् अभिवर्धतां चिरमभिवर्धतां देशेऽस्मिन् संस्कृतश्रीः।


**विद्वान् के.एस्.वेङ्कटाचारि**

भूतपूर्वः प्राचार्यः व्याकरणप्राध्यापकश्च

श्रीमन्महाराजसंस्कृतमहाविद्यालयः, मैसूरु



# सन्देशः

बहोः कालात् संस्कृतज्ञानां संस्कृताभिमानिनां च मनसि संस्कृतनिमित्तमेव कश्चन विश्वविद्यालयः, निर्देशनालयश्च भवतु इति आशा आसीत् । बहुभिः बहुधा तदर्थं कृतः प्रयासः इदानीं सफलस्सञ्जातः ।

वेदशास्त्राणां संस्कृतभाषायाश्च अभिवृद्ध्यर्थं संस्कृतविश्वविद्यालयस्य अधिकारिणः अवश्यं योग्यान् कार्यक्रमान् आयोजयन्तीति सर्वेषां वर्तते महती प्रतीक्षा । प्रतीक्षैषा साफल्यं गता ।

वेदशास्त्राध्ययने प्राचीना पद्धतिः तथैव संरक्षणीया । तेन सह सङ्गणकादिनूतन–विषयाणामध्ययनेऽपि अवकाशः परिकल्पनीयः । प्राचीनार्वाचीनविद्ययोः सङ्गमेन संस्कृतविश्वविद्यालयः सुशोभितः भवतु ।

“ज्ञानभण्डारः” इति प्रसिद्धे वेदे संशोधनकार्येण अविज्ञातानि अमूल्यानि विषयरूपाणि रत्नानि प्रकाशितानि भवन्ति । तेन भवति सर्वेषामुपकारः ।

सहृदयानां प्रो. मल्लेपुरं जि. वेङ्कटेशमहाभागानां सारथ्ये संस्कृतविश्वविद्यालयः **‘वर्धतामभिवर्धताम्’** इत्याशासे ।

**विदुषी वि. एस्. इन्दिरम्मा**
भूतपूर्वप्राचार्या,
श्रीचामराजेन्द्रसंस्कृतमहाविद्यालयः,
बेङ्गलूरु

# ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ವಿದ್ಯಾಲಯ, ಗೋಕರ್ಣ

**–ಕಿರುಪರಿಚಯ**



ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ವಿದ್ಯಾಲಯ

ಗೋಕರ್ಣ 'ದಕ್ಷಿಣಕಾಶಿ' ಎಂದೇ ಖ್ಯಾತವಾದ ಐತಿಹಾಸಿಕ ಹಾಗೂ ಪುರಾಣಪ್ರಸಿದ್ಧಕ್ಷೇತ್ರ. ಅಷ್ಟೇ ಅಲ್ಲ ಮಂತ್ರವಿದರ ನಾಡೂ ಹೌದು. ಅಂತಾರಾಷ್ಟ್ರೀಯ ಪ್ರಸಿದ್ಧಿಪಡೆದ ಮಂತ್ರದ್ರಷ್ಟಾರರು, ಯಾಜ್ಞಿಕಪ್ರಕ್ರಿಯಾ ಪರಿಣತರು, ಗಣಿತಜ್ಞರು ಮತ್ತು ಚಿಂತಕರಿಗೆ ಜನ್ಮನೀಡಿದ ಭೂಮಿಯಿದು.

ಇಂತಹ ಕ್ಷೇತ್ರದಲ್ಲಿ ವೇದ–ಸಂಸ್ಕೃತಗಳ ರಕ್ಷಣೆ, ಪ್ರಸಾರಗಳಿಗೆಂದೇ ಸ್ಥಾಪಿತವಾದ ಸಂಸ್ಥೆ "ಶ್ರೀ ಮೇಧಾ ದಕ್ಷಿಣಾಮೂರ್ತಿ ಸಂಸ್ಕೃತ ವಿದ್ಯಾಪೀಠ". ಗೋಕರ್ಣದ ವೇ. ಹೊಸ್ಮನೆ ಶಾಸ್ತ್ರಿಗಳಿಂದ ಸ್ಥಾಪಿತವಾಗಿ ಮಹರ್ಷಿ ದೈವರಾತರಿಂದ ಪೋಷಿತವಾದ ಈ ಸಂಸ್ಥೆಯ ವಜ್ರ ಮಹೋತ್ಸವವು 1959 ರಲ್ಲಿ ಆಯೋಜಿತವಾದಾಗ ಭಾರತದ ರಾಷ್ಟ್ರಪತಿ ಡಾ. ಬಾಬು ರಾಜೇಂದ್ರಪ್ರಸಾದರು ಈ ಸಂದರ್ಭದಲ್ಲಿ ಸಂಸ್ಥೆಗೆ ಭೇಟಿಯಿತ್ತದ್ದು ಅವಿಸ್ಮರಣೀಯ.

ಉತ್ತರಪ್ರದೇಶದ ಕಾನ್ಪುರದ "ಭಾರತೀಯ ಚತುರ್ಧಾಮ ವೇದಭವನ ನ್ಯಾಸ"ದ ವರಿಷ್ಠ ಸ್ವರ್ಗೀಯ ಶ್ರೀ ಸತ್ಯದೇವ ಬ್ರಹ್ಮಚಾರಿಯವರು ಗೋಕರ್ಣದ ವೈದಿಕ ಪರಂಪರೆ, ಅಗ್ನಿಹೋತ್ರ, ಮತ್ತು ವೇದಾಧ್ಯಯನಪರಿಪಾಟಿಗಳನ್ನು ಕಂಡು ಪ್ರಭಾವಿತರಾಗಿ ಗೋಕರ್ಣದಲ್ಲಿನ ಈ ಸಂಸ್ಥೆಯನ್ನು ನ್ಯಾಸಕ್ಕೆ ತೆಗೆದುಕೊಂಡರು. 1971ರಲ್ಲಿ ಕರ್ನಾಟಕದ ಆಗಿನ ರಾಜ್ಯಪಾಲ ಶ್ರೀ ಧರ್ಮವೀರರ ಸಹಕಾರದಿಂದ ಈ ವಿದ್ಯಾಲಯವನ್ನು ಸ್ಥಾಪಿಸಿ ಸರ್ಕಾರದ ಪೂರ್ಣಪ್ರಮಾಣದ ಅನುದಾನ, ಹಾಗೂ ಖಾಯಂ ಮಾನ್ಯತೆಗಳನ್ನು ಪಡೆದರು.

ದಿ. ಬ್ರಹ್ಮಚಾರಿಯವರ ಸತತಪರಿಶ್ರಮದಿಂದ ದಾಂಡೇಲಿಯ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಹಾಗೂ ರಾಜ್ಯಸರ್ಕಾರದ ಅನುದಾನಗಳಿಂದ ಈ ವಿದ್ಯಾಲಯಕ್ಕೆ ಸುಭದ್ರವಾದ ಸ್ವಂತಕಟ್ಟಡವು ರಚಿತವಾಯಿತು. ಈ ಭವನಕ್ಕೆ ಅಗತ್ಯವಾದ ಭೂಮಿಯನ್ನು ಶೃಂಗೇರಿಯ ಶಾರದಾಪೀಠದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀಮದಭಿನವ ವಿದ್ಯಾತೀರ್ಥ ಸ್ವಾಮೀಜಿಯವರು ತಮ್ಮ ಮಠದವತಿಯಿಂದ ಅನುಗ್ರಹಿಸಿದ್ದನ್ನು ಮರೆಯುವಂತಿಲ್ಲ. ಮಾನ್ಯ ರಾಜ್ಯಪಾಲ ಶ್ರೀ ಧರ್ಮವೀರರಿಂದ ಶಿಲಾನ್ಯಾಸವಾದ ವೇದಭವನವನ್ನು 1975ರಲ್ಲಿ ಮಾಜಿ ರಾಷ್ಟ್ರಪತಿ ಶ್ರೀ ವಿ.ವಿ. ಗಿರಿಯವರ ಉಪಸ್ಥಿತಿಯಲ್ಲಿ ಆಗಿನ ರಾಜ್ಯಪಾಲ ಮಾನ್ಯ ಮೋಹನಲಾಲ್ ಸುಖಾಡಿಯಾ ಲೋಕಾರ್ಪಣೆಗೊಳಿಸಿದರು.

1976 ರಿಂದ ಪ್ರಾರಂಭಗೊಂಡ ಈ ವಿದ್ಯಾಲಯದಲ್ಲಿ ನಾಲ್ಕೂ ವೇದಗಳು, ಅಲಂಕಾರ, ವ್ಯಾಕರಣ, ನವೀನನ್ಯಾಯ ಹಾಗೂ ಅದ್ವೈತವೇದಾಂತ ಶಾಸ್ತ್ರಗಳಲ್ಲಿ ಪ್ರಥಮಾ ತರಗತಿಯಿಂದ ಪ್ರಾರಂಭಿಸಿ ವಿದ್ವದುತ್ತಮಾದ ವರೆಗಿನ ತರಗತಿಗಳ ವರೆಗೆ ವಾತುಲಾದ್ಯಾಗಮದಲ್ಲಿಯೂ ಸೇರಿ ಅಧ್ಯಯನ–ಅಧ್ಯಾಪನಗಳು ನಡೆದುಬಂದವು. ನಾಡಿನ ವಿದ್ಯಾರ್ಥಿಗಳು ಮಾತ್ರವಲ್ಲದೆ ಮಹಾರಾಷ್ಟ್ರ, ಉತ್ತರಪ್ರದೇಶ, ಓಡಿಸ್ಸಾ, ಬಿಹಾರಗಳಿಂದ ಹಾಗೂ ನೆರೆ ರಾಷ್ಟ್ರವಾದ ನೇಪಾಳದಿಂದಲೂ ಇಲ್ಲಿಗೆ ಬಂದು ವೇದಶಿಕ್ಷಣವನ್ನು ಪಡೆದು ಇಂದು ಜಾಗತಿಕಸ್ತರದಲ್ಲಿ ಉನ್ನತವಾದ ಸ್ಥಾನದಲ್ಲಿದ್ದು ವೇದ–ಶಾಸ್ತ್ರಗಳ ಪ್ರಸಾರವನ್ನು ಮಾಡುತ್ತಿದ್ದಾರೆಂಬುದು ಅತ್ಯಂತ ಅಭಿಮಾನದ ವಿಷಯವಾಗಿದೆ. ನಾಡಿನ ಮುಖ್ಯಮಂತ್ರಿಯಾಗಿದ್ದ ಶ್ರೀ ರಾಮಕೃಷ್ಣ ಹೆಗಡೆ, ರಾಜ್ಯಪಾಲ ಶ್ರೀ ಗೋವಿಂದ ನಾರಾಯಣ್ ಮೊದಲಾದ ಅನೇಕ ಗಣ್ಯರು ಈ ವಿದ್ಯಾಲಯವನ್ನು ಸಂದರ್ಶಿಸಿ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

2003–04ರಲ್ಲಿ ಶತಮಾನೋತ್ತರ ರಜತೋತ್ಸವವನ್ನು ಆಚರಿಕೊಂಡ ಈ ವಿದ್ಯಾಲಯದ ವಿದ್ಯಾರ್ಥಿಗಳು ರಾಷ್ಟ್ರಸ್ತರೀಯ ವಾಕ್ಸ್ಪರ್ಧೆಗಳಲ್ಲಿ ಪಾಲ್ಗೊಂಡು ಸುವರ್ಣ–ರಜತ–ಕಂಚಿನ ಪದಕಗಳನ್ನು ಪಡೆದಿರುವುದು ಇಲ್ಲಿ ಉಲ್ಲೇಖನೀಯ ಸಂಗತಿ. 1989ರಲ್ಲಿ ಭಾರತೀಯ ಚತುರ್ಧಾಮ ವೇದಭವನ ನ್ಯಾಸವು ಈ ವಿದ್ಯಾಲಯವನ್ನು ಸರ್ಕಾರದ ವಶಕ್ಕೆ ನೀಡಿ ಸರ್ಕಾರದ ಸಂಪೂರ್ಣ ಸ್ವಾಮಿತ್ವಕ್ಕೆ ಒಳಪಡಿಸಿತು. ಅಲ್ಲಿಂದ ಇದು ಸರ್ಕಾರದ ನೇರವಾದ ಆಡಳಿತದಲ್ಲಿದೆ.



ಶಾಸ್ತ್ರಾಧ್ಯಯನನಿರತ ವಿದ್ಯಾರ್ಥಿಗಳು.

ತಮ್ಮ ಪೂರ್ವಾಶ್ರಮದಲ್ಲಿ ಈ ವಿದ್ಯಾಲಯದ ವಿದ್ಯಾರ್ಥಿಗಳಾಗಿದ್ದ ಹೊಸನಗರದ ಶ್ರೀ ರಾಮಚಂದ್ರಾಪುರ ಮಠದ ಪೀಠಾಧಿಪತಿಗಳಾದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀಮದ್ರಾಘವೇಶ್ವರ ಭಾರತೀ ಶ್ರೀಗಳು ವಿದ್ಯಾಲಯದ ವಿದ್ಯಾರ್ಥಿಗಳಿಗೆ "ಅಮೃತಾನ್ನ" ಭೋಜನದ ವ್ಯವಸ್ಥೆಯನ್ನು ಕಲ್ಪಿಸಿರುತ್ತಾರೆ.

ಕರ್ನಾಟಕ ಸರ್ಕಾರವು ಈ ವರ್ಷ ಲೋಕೋಪಯೋಗಿ ಇಲಾಖೆಯ ಮೂಲಕ ಅಂದಾಜು 25 ಲಕ್ಷ ರೂ.ಗಳ ವೆಚ್ಚದಲ್ಲಿ ಬಹಳಕಾಲದಿಂದ ಜೀರ್ಣವಾಗಿದ್ದ ಕಟ್ಟಡದ ದುರಸ್ತಿಕಾರ್ಯವನ್ನು ಮಾಡಿಸಿದೆ.

ನಾಲ್ಕು ವೇದಗಳು, ನಾಲ್ಕು ಶಾಸ್ತ್ರಗಳು, ಪ್ರಾಥಮಿಕ ವಿಭಾಗ ಹಾಗೂ ಆಗಮ ವಿಭಾಗಗಳಲ್ಲಿ ಹತ್ತೊಂಬತ್ತು ಮಂದಿ ಅಧ್ಯಾಪಕರು ಕಾರ್ಯನಿರ್ವಹಿಸುತ್ತಿದ್ದಾರೆ. ವ್ಯಾಕರಣ ಹಾಗೂ ನವೀನನ್ಯಾಯ ಶಾಸ್ತ್ರಗಳಲ್ಲಿ ತಲಾ ಓರ್ವ ಸಹಾಯಕ ಪ್ರಾಧ್ಯಾಪಕರು, ಸಾಮವೇದದಲ್ಲಿ ಓರ್ವ ಅತಿಥಿ ಉಪನ್ಯಾಸಕರು. ಪಾಠಶಾಲಾ ವಿಭಾಗದಲ್ಲಿ ಓರ್ವ ಶಿಕ್ಷಕಿ ಮತ್ತು ಆಗಮ ವಿಭಾಗದಲ್ಲಿ ಗುತ್ತಿಗೆ ಆಧಾರಿತ ಅಧ್ಯಾಪಕರು ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಇದೀಗ ಪಾಠಶಾಲಾ ವಿಭಾಗದಲ್ಲಿ ಒಂದು ನೂರಾ ಐವತ್ತೈದು ಹಾಗೂ ವೇದ–ಸಂಸ್ಕೃತ ವಿದ್ವತ್ ವಿಭಾಗದಲ್ಲಿ ಅರವತ್ತು ಮಂದಿ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ.

❑ **ಪ್ರಾಚಾರ್ಯರು**

ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು,
ಗೋಕರ್ಣ

## ಅಂಚೆ ಮೂಲಕ ಸಂಸ್ಕೃತ ಕಲಿಯಿರಿ

ಸಂಸ್ಕೃತ ಭಾರತಿಯು ಸಂಸ್ಕೃತ ಪ್ರಿಯರಿಗೆ ಮನೆ ಹಾಗೂ ಕಾರ್ಯಾಲಯದಲ್ಲಿಯೇ ಇದ್ದು ಸಂಸ್ಕೃತ ಕಲಿಯುವ ಸದಾವಕಾಶವನ್ನು ಕಲ್ಪಿಸಿದೆ. ಈ ಯೋಜನೆ ಎರಡು ವರ್ಷಗಳದ್ದಾಗಿದ್ದು ಪ್ರವೇಶ, ಪರಿಚಯ, ಶಿಕ್ಷಾ ಮತ್ತು ಕೋವಿದ ಎಂಬ ತಲಾ ಆರು ತಿಂಗಳ ಅವಧಿಯ ನಾಲ್ಕು ಹಂತಗಳನ್ನೊಳಗೊಂಡಿದೆ. ಶಿಕ್ಷಣದ ಮಾಧ್ಯಮ ಕನ್ನಡ ಅಥವಾ ಇಂಗ್ಲಿಷ್ ಆಗಿರುತ್ತದೆ. ಪ್ರತಿ ಆರು ತಿಂಗಳಿಗೊಮ್ಮೆ ಹೊಸ ತಂಡಕ್ಕೆ ಪ್ರವೇಶಾವಕಾಶವಿದ್ದು ಪ್ರವೇಶಾರ್ಥಿಯ ವಯೋಮಿತಿ ಕನಿಷ್ಠ 16 ವರ್ಷಗಳಿರಬೇಕು. ಈ ಯೋಜನೆಯಲ್ಲಿ ಸಂಸ್ಕೃತ ಕಲಿಯಲು ಯಾವುದೇ ಪೂರ್ವ ಸಂಸ್ಕೃತ ಜ್ಞಾನದ ಅಥವಾ ಕಲಿತಿರುವ ಆವಶ್ಯಕತೆ ಇಲ್ಲ. 2 ವರ್ಷಗಳ ನಂತರ ನೀವು ಮೂಲ ಭಗವದ್ಗೀತೆ, ರಾಮಾಯಣ ಮತ್ತು ಮಹಾಭಾರತವನ್ನು ಓದಿ ಅರ್ಥಮಾಡಿಕೊಳ್ಳಬಲ್ಲಿರಿ.

ಈ ಯೋಜನೆಯು ಹೆಚ್ಚು ಜನಪ್ರಿಯವಾಗಿದ್ದು ದೇಶ–ವಿದೇಶಗಳಿಂದ ಜನರನ್ನು ಆಕರ್ಷಿಸಿದೆ. (ಫೆಬ್ರವರಿ ಹಾಗೂ ಆಗಸ್ಟ್ ತಿಂಗಳಿನಲ್ಲಿ ಪರೀಕ್ಷೆ ಇರುತ್ತದೆ. ಪ್ರತಿ ತಿಂಗಳು ಪ್ರತ್ಯಕ್ಷ ಶಿಕ್ಷಣ ವ್ಯವಸ್ಥೆ ಇದೆ.) ಒಂದು ಲಕ್ಷಕ್ಕೂ ಹೆಚ್ಚು ಜನರು ಕಳೆದ 30 ವರ್ಷಗಳ ಅವಧಿಯಲ್ಲಿ ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ.

ಹೊಸ ತಂಡದ ಶಿಕ್ಷಣ ಆರಂಭವಾಗಿದೆ. ಆವೇದನ ಪತ್ರ ಮತ್ತು ಹೆಚ್ಚಿನ ವಿವರಗಳಿಗೆ ಸ್ವವಿಳಾಸವಿರುವ 5 ರೂ. ಅಂಚೆ ಚೀಟಿಯನ್ನು ಹೊಂದಿರುವ ಕವರಿನೊಂದಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಂಸ್ಕೃತ ಭಾರತೀ, 'ಅಕ್ಷರಮ್', 8ನೇ ಅಡ್ಡರಸ್ತೆ, ಗಿರಿನಗರ, ಬೆಂಗಳೂರು – 560085. ದೂರವಾಣಿ: 080–26721052/26722576. e-mail: samskritam@gmail.com

**ಓದುಗರಲ್ಲಿ ಮನವಿ**

**ವಾರ್ತಾಪತ್ರಕ್ಕೆ ವರದಿಯನ್ನು ಕಳುಹಿಸಿಕೊಡುವವರು ಭಾವಚಿತ್ರದಲ್ಲಿರುವವರ ಹೆಸರನ್ನು ಅದರ ಹಿಂಭಾಗದಲ್ಲಿ ಸ್ಪಷ್ಟವಾಗಿ ನಮೂದಿಸುವುದರ ಮೂಲಕ ವಾರ್ತಾಪತ್ರಕ್ಕೆ ಸಹಕಾರ ನೀಡಬೇಕಾಗಿ ವಿನಂತಿ. – ಸಂ.**

# ವಿದ್ಯಾವಾಚಸ್ಪತಿ ಎನ್.ಎಸ್. ವೆಂಕಟನಾಥಾಚಾರ್ಯರು



ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತ್ರೈಮಾಸಿಕ ವಾರ್ತಾಪತ್ರಕ್ಕೆ ತಮ್ಮನ್ನು ಸಂದರ್ಶಿಸಲು ಹರ್ಷಿಸುತ್ತದೆ.

**ಸಂ.** ತಾವು ಸಂಸ್ಕೃತಾಧ್ಯಯನವನ್ನು ಸತತವಾಗಿ ಮಾಡಿರುವಿರಿ. ತಮ್ಮ ಅಧ್ಯಯನ ಎಲ್ಲಾಯಿತು? ತಮ್ಮ ವಿದ್ಯಾಗುರುಗಳು ಯಾರು?

**ವೆಂ.** ನಾನು ತಿರುಪತಿಯಲ್ಲಿ ಪಂಡಿತರತ್ನಂ ಉತ್ತಮೂರು ವೀರರಾಘವಾಚಾರ್ಯ ಹಾಗೂ ಡಿ.ಟಿ. ತಾತಾಚಾರ್ಯರಲ್ಲಿ ನವೀನನ್ಯಾಯ ಶಾಸ್ತ್ರವನ್ನೂ, ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದ ಪ್ರಧಾನ ಪಂಡಿತರಾಗಿದ್ದ ಸೋ. ನರಸಿಂಹಾಚಾರ್ಯರ ಬಳಿ ವ್ಯಾಕರಣಶಾಸ್ತ್ರವನ್ನೂ, ಸಾಹಿತ್ಯವನ್ನು ತಂದೆಯವರಾದ ಶ್ರೀನಿವಾಸ ರಾಘವಾಚಾರ್ಯರಿಂದಲೂ, ಕೃಷ್ಣಯಜುರ್ವೇದವನ್ನು ಕಂಚಿಯ ಘನಪಾಠಿಗಳಾದ ಪರಾಂಕುಶಾಚಾರ್ಯರಿಂದಲೂ ಅಧ್ಯಯನ ಮಾಡಿದೆ. ಆನೇಕಲ್ ರಾಮಶಾಸ್ತ್ರಿಗಳಿಂದ ಕಲಿತು ಕನ್ನಡ ಪಂಡಿತ್ ಪರೀಕ್ಷೆಯಲ್ಲಿ ಉತ್ತೀರ್ಣನಾದೆ. ಹೀಗೆ ಕಾಲಕಾಲಕ್ಕೆ ಅನೇಕ ಗುರುಗಳಿಂದ ಶಾಸ್ತ್ರಾಧ್ಯಯನ ಮಾಡಿದೆ.

**ಸಂ.** ತಮ್ಮಿಂದ ರಚಿತವಾದ, ಸಂಪಾದಿಸಲ್ಪಟ್ಟ ಕೃತಿಗಳು ಯಾವುವು?

**ಸಂದರ್ಶಕ: ಡಾ. ಎಸ್. ರಂಗನಾಥ್**

**ವೆಂ.** ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಮೂವತ್ತು ವರ್ಷ ಕಾಲ ನಾನು ಸೇವೆ ಮಾಡಿದೆ. ಅಲ್ಲೇ ನನ್ನಿಂದ ಅನೇಕ ಕೃತಿಗಳು ಸಂಪಾದನೆ ಮಾಡಿ ಪ್ರಕಟಿಸಲ್ಪಟ್ಟಿತು. ಅವುಗಳಲ್ಲಿ ಪ್ರಮುಖವಾದುದೆಂದರೆ– ನೀತಿಸೂತ್ರಾಣಿ (1957), ಕೌಟಿಲ್ಯನ ಅರ್ಥಶಾಸ್ತ್ರ (1960), ವಾಲ್ಮೀಕಿ ರಾಮಾಯಣ–ಕಟಕ ವ್ಯಾಖ್ಯಾನಸಹಿತ (1965), ಅದ್ವಯತಾರಕೋಪನಿಷತ್ತು (1969), ಸೌಂದರ್ಯಲಹರೀ (1969), ಮಂಡಲ ಬ್ರಾಹ್ಮಗೋಪನಿಷತ್ ಮತ್ತು ಯೋಗತಾರಾವಳಿ (1970), ಪಂಚದಶಾಂಗಯೋಗ ಪ್ರಕರಣಂ (1969), ದಕ್ಷಿಣಾಮೂರ್ತಿ ಸ್ತೋತ್ರಂ (1972), ಕಾವ್ಯಪ್ರಕಾಶ–ಸಂಕೇತ ಮಧುಮತೀ ವ್ಯಾಖ್ಯಾನಸಹಿತ (1974), ಸಾಂಖ್ಯದರ್ಶನಂ (1982), ಬೇಧನಿರಾಸಃ (1989), ಶ್ರೀಮದ್‌ವಾಲ್ಮೀಕಿ ರಾಮಾಯಣಂ ಅಯೋಧ್ಯಾಕಾಂಡ (1998), ಉಪನಿಷತ್–ಉಪನಿಷತ್ ಚಂದ್ರಿಕಾಸಹಿತ (2008), ಇತ್ಯಾದಿ. ನನ್ನಿಂದ ಎರಡು ವರ್ಷ ಕಾಲ ಮೈಸೂರು ವಿಶ್ವವಿದ್ಯಾಲಯದ ಸಂಗೀತ ಶಾಲೆಯಲ್ಲೂ ಸೇವೆ ಮಾಡಲ್ಪಟ್ಟಿತು.

**ಸಂ.** ತಮ್ಮ ಶಿಷ್ಯಕೋಟಿಯಲ್ಲಿ ಪ್ರಸಿದ್ಧರು ಯಾರು?

**ವೆಂ.** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಅಮೇರಿಕಾ, ಇಸ್ರೇಲ್, ಥಾಯ್‌ಲ್ಯಾಂಡ್ ಮುಂತಾದ ದೇಶಗಳಿಗೆ ಭೇಟಿ ನೀಡಿದ ಆಚಾರ್ಯರಾದ ವಿದ್ವಾನ್ ಎಚ್.ವಿ. ನಾಗರಾಜರಾವ್, ಈಗಿನ ಪ್ರಾಚ್ಯವಿದ್ಯಾ ಸಂಶೋಧನಾಲಯದ ಉಪನಿರ್ದೇಶಕರಾದ ಸಾಹಿತ್ಯ ವ್ಯಾಕರಣ ವಿದ್ವಾನ್ ಡಾ. ಟಿ.ವಿ. ಸತ್ಯನಾರಾಯಣ, ನ್ಯಾಷನಲ್ ಮಹಾವಿದ್ಯಾಲಯದ ನಿವೃತ್ತ ಸಂಸ್ಕೃತ ಪ್ರಾಚಾರ್ಯರಾದ ಪ್ರೊ. ಎಚ್.ಎಸ್. ವರದದೇಶಿಕಾಚಾರ್ಯ (ಈಗ ರಂಗಪ್ರಿಯ ಮಹಾಸ್ವಾಮಿಗಳು) ನನ್ನ ಸ್ಮೃತಿಯಲ್ಲಿ ಎಂದೆಂದಿಗೂ ಇರುವ ಶಿಷ್ಯರು.

**ಸಂ.** ಸಾಮಾನ್ಯ ಜನರಿಗೆ ಸಂಸ್ಕೃತ ಜ್ಞಾನ ಆವಶ್ಯಕವೇ?

**ವೆಂ.** ಭಾರತೀಯ ಆಧ್ಯಾತ್ಮಿಕ ಗ್ರಂಥಗಳೆಲ್ಲವೂ ಸಂಸ್ಕೃತ ಭಾಷೆಯಲ್ಲೇ ಪ್ರಸಿದ್ಧವಾಗಿವೆ. ಆದ್ದರಿಂದ ಅದರ ಅಧ್ಯಯನದಿಂದಲೇ ಆಧ್ಯಾತ್ಮಿಕ ಸೌಂದರ್ಯವು ವೃದ್ಧಿಯಾಗುತ್ತದೆ. ಆದ್ದರಿಂದ ಸಂಸ್ಕೃತ ಭಾಷೆಯ ಅಧ್ಯಯನವು ಆವಶ್ಯಕ ಎಂದು ನಾವು ಭಾವಿಸುತ್ತೇವೆ.

**ಸಂ.** ವರ್ತಮಾನ ವಿಜ್ಞಾನಯುಗದಲ್ಲಿ ಶಾಸ್ತ್ರಗಳ ಮಹತ್ವವೇನು?

**ವೆಂ.** ವಿಜ್ಞಾನವು ಎರಡು ರೀತಿಯಾದುದು. ಭೌತಿಕ ಹಾಗೂ ಆಧ್ಯಾತ್ಮಿಕ ಎಂದು. ಆಧ್ಯಾತ್ಮಿಕದ ಸಂಬಂಧವಿಲ್ಲದ ಭೌತಿಕವಿಜ್ಞಾನವು ತ್ರಾಣವಿಲ್ಲದ ಶರೀರದಂತೆ ಅನುಪಯುಕ್ತವಾದುದು. ಸರ್ವಾಂಗಸಂಪನ್ನವಾಗಿದ್ದರೂ ಶರೀರಕ್ಕೆ ಚಿತ್‌ಸಂಯೋಗವು ಹೇಗೆ ಆವಶ್ಯಕವೋ ಹಾಗೆಯೇ ಇತರ ಭಾಷೆಗಳಿಗೆ ಸಂಸ್ಕೃತದ ಸಂಬಂಧದಿಂದ ಪುಷ್ಟಿಯುಂಟಾಗುತ್ತದೆ.

**ಸಂ.** ಈಗ ಸಂಸ್ಕೃತ ಸಾಮಯಿಕವೇ?

**ವೆಂ.** ಖಂಡಿತ ಸಂಸ್ಕೃತವು ಸಾಮಯಿಕವೇ ಆಗಿವೆ. ವಿಜ್ಞಾನಿಗಳ ಪ್ರಕಾರ ಎಲ್ಲವೂ ಭೌತವಿಜ್ಞಾನದಿಂದಲೇ ಸಿದ್ಧವಾಗುತ್ತದೆ. ಸಂಸ್ಕೃತದಲ್ಲಾದರೋ ಔಪನಿಷದ್ ವಿಜ್ಞಾನವು ದೈವಿಕ ಆಧ್ಯಾತ್ಮಿಕವೆಂದು ಇಬ್ಭಾಗವಾಗುತ್ತದೆ. ಸಂಸ್ಕೃತ ಬಿಟ್ಟು ಮಿಕ್ಕ ಭಾಷೆಯ ಅಧ್ಯಯನದಿಂದ ತಾಪತ್ರಯಗಳಲ್ಲಿ ಒಂದು ತಾಪವನ್ನು ಮಾತ್ರ ಬಗೆಹರಿಸಿಕೊಳ್ಳಬಹುದು. ಆದರೆ, ಮಿಕ್ಕ ಎರಡು ಹಾಗೆಯೇ ಉಳಿಯುತ್ತದೆ. ಆದಿದೈವಿಕ ಹಾಗೂ ಆಧ್ಯಾತ್ಮಿಕ ತಾಪಗಳು ಸಂಸ್ಕೃತಾಧ್ಯಯನದಿಂದ ಮಾತ್ರ ನಿವಾರಣೆಯಾಗುತ್ತದೆ. ಪ್ರಕೃತಿಯ ತಾತ್ವಿಕ ಅರ್ಥವನ್ನು ಸಂಸ್ಕೃತ ಭಾಷೆಯ ಪ್ರಕೃತಿ ಮಾತ್ರ ಸೂಚಿಸಬಲ್ಲದು. ಯಾವಾಗ ಎಂದರೆ ಸಂಸ್ಕೃತಾನುಬಂಧಿಯಾದ ಪ್ರತ್ಯಯದಿಂದ ಮಾತ್ರ. ಆದ್ದರಿಂದ ಪ್ರಕೃತಿ ಪ್ರತ್ಯಯದಿಂದ ಸೇರಿರುವ ಸಂಸ್ಕೃತ ಭಾಷೆಯ ಅಧ್ಯಯನವು ಸಮಸಾಮಯಿಕ ಮತ್ತು ಆವಶ್ಯಕ. ಆದ್ದರಿಂದಲೇ ಮಹಾಭಾಷ್ಯದ ಎರಡನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ: "ಸಂಸ್ಕೃತ ಭಾಷೆಯಲ್ಲಿ ಪ್ರಕೃತಿಯ ಅರ್ಥವನ್ನು ಪ್ರತ್ಯಯವು ಯಥಾವತ್ತಾಗಿ ಸೂಚಿಸುತ್ತದೆ" ಎಂದು.

**ಸಂ.** ಕನ್ನಡ-ಸಂಸ್ಕೃತದ ಸಂಬಂಧ ಹೇಗಿರಬೇಕು?

**ವೆಂ.** ಸಂಸ್ಕೃತ ಭಾಷೆಯಲ್ಲಿರುವ ವೈಜ್ಞಾನಿಕ ಗ್ರಂಥಗಳು ಕನ್ನಡಕ್ಕೆ ಅನುವಾದವಾಗಬೇಕು. ಕನ್ನಡದ ಉಪಯುಕ್ತ ಗ್ರಂಥಗಳು ಸಂಸ್ಕೃತಕ್ಕೂ ಅನುವಾದವಾಗಬೇಕು. ಆಗಲೇ ಎರಡೂ ಭಾಷೆಗಳು ಬೆಳೆಯಲು ಸಾಧ್ಯ. ಅಂತಹ ಕಾರ್ಯವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮಾಡಬೇಕು.

**ಸಂ.** ಯಾವ ಯಾವ ಪ್ರಶಸ್ತಿಗಳು ತಮಗೆ ಸಂದಿವೆ?

**ವೆಂ.** ಮೈಸೂರು ಮಹಾಪಾಠಶಾಲೆಯಿಂದ 'ಪಂಡಿತರತ್ನಂ', ಶ್ರೀರಂಗಂನಿಂದ 'ವಿದ್ಯಾವಾಚಸ್ಪತಿ', ಪರಕಾಲಮಠದಿಂದ 'ಪಂಡಿತಭೂಷಣಂ', ಆಂಡವನ್ ಸನ್ನಿಧಿಯಿಂದ 'ಸರಸ್ವತೀಪುತ್ರಃ', ಎಂ.ಪಿ.ಎಲ್. ಶಾಸ್ತ್ರೀ ಇಂಡಲಾಜಿಕಲ್ ಸಂಸ್ಥೆಯಿಂದ 'ವಿದ್ಯಾಲಂಕಾರ', ಕರ್ನಾಟಕ ಸರ್ಕಾರದಿಂದ 'ರಾಜ್ಯೋತ್ಸವ ಪ್ರಶಸ್ತಿ' ಇತ್ಯಾದಿಗಳು.

**ಸಂ.** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಈಗ ಯಾವ ದಿಸೆಯಲ್ಲಿ ಕಾರ್ಯ ಮಾಡಬೇಕು?

**ವೆಂ.** ನಮ್ಮ ಘನ ಸರ್ಕಾರದಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪಿತವಾಗಿರುವುದು ಅತ್ಯಂತ ಹೆಮ್ಮೆಯ ವಿಷಯ. ಅಲ್ಲಿ ಉಪನಿಷತ್ತುಗಳ ಪಾಠ-ಪ್ರವಚನಗಳು ವೈಜ್ಞಾನಿಕ ಹಿನ್ನೆಲೆಯಲ್ಲಿ ನಡೆಯಬೇಕು. ಉಪನಿಷತ್ತಿನಲ್ಲಿರುವ ವೈಜ್ಞಾನಿಕ ವಿಷಯಗಳು ಜನಸಾಮಾನ್ಯರಿಗೆ ಅರಿವಾಗಬೇಕು.

**ಸಂ.** ಧನ್ಯವಾದಗಳು.

**ವೆಂ.** ಶುಭವಾಗಲಿ.




ಆಚಾರ್ಯ ಭರ್ತೃಹರಿಪ್ರಣೀತ

## 'ವಾಕ್ಯಪದೀಯ'

ಬ್ರಹ್ಮಕಾಂಡ-ಕಾಲಸಮುದ್ದೇಶ-ಕ್ರಿಯಾಸಮುದ್ದೇಶಗಳ ಅನುವಾದಸಹಿತ

ಕನ್ನಡಾನುವಾದ: ಪ್ರೊ. ಎನ್. ರಂಗನಾಥ ಶರ್ಮಾ

ಪ್ರಕಾಶಕರು: ಪ್ರಸಾರಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಚಾಮರಾಜಪೇಟೆ, ಬೆಂಗಳೂರು-560018.

ಪುಟಗಳು: 328 ಬೆಲೆ: ರೂ. 250.00

ಅಧಿಕೃತ ಮಾರಾಟಗಾರರು: ಸಪ್ನ ಬುಕ್ ಹೌಸ್ (ಪ್ರ) ಲಿ.
ಗಾಂಧಿನಗರ, ಬೆಂಗಳೂರು – 560009
ದೂರವಾಣಿ: 080-22269648

# ಸಂಸ್ಕೃತ ಶಿಕ್ಷಣ ನಡೆದು ಬಂದ ದಾರಿ

ಸುಮಾರು 165–170 ವರ್ಷಗಳ ಹಿಂದೆ ಗುರುಕುಲಗಳನ್ನು ಬಿಟ್ಟರೆ ಸಾಮಾನ್ಯ ರೀತಿಯಲ್ಲಿ ಸಂಸ್ಕೃತ, ವೇದಾದಿಗಳ ಶಿಕ್ಷಣ ಅಲಭ್ಯವಾಗಿತ್ತು. ಶ್ರೀಕೃಷ್ಣರಾಜ ಒಡೆಯರ್‌ರವರ ಆಳ್ವಿಕೆಯ ಸಂದರ್ಭದಲ್ಲಿ ಶ್ರೀ ಪೂರ್ಣಯ್ಯನವರು ದಿವಾನರಾಗಿದ್ದರು. ಆ ಸಂದರ್ಭದಲ್ಲಿ ಶ್ರೀ ಮಹಾರಾಜರವರ ಗಮನಕ್ಕೆ ಒಂದು ಸಂಸ್ಕೃತ ವೇದ ಪಾಠಶಾಲೆಯನ್ನು ಪ್ರಾರಂಭಿಸಬೇಕೆಂಬ ಅಭಿಪ್ರಾಯ ಬಂದಿತು. ಕೂಡಲೇ ಕಾರ್ಯೋನ್ಮುಖರಾಗಿ ಶ್ರೀ ಪೂರ್ಣಯ್ಯನವರ ಅಭಿಪ್ರಾಯದಂತೆ ಪೂರ್ಣಯ್ಯನವರ ಛತ್ರದಲ್ಲಿಯೇ ಪಾಠಶಾಲೆಯನ್ನು ಪ್ರಾರಂಭಿಸಿದರು.

ಆಂಧ್ರ, ತಮಿಳುನಾಡುಗಳಿಂದ ಸಂಸ್ಕೃತ ವಿದ್ವಾಂಸರನ್ನು ಕರೆಸಲಾಯಿತು. ವಿದ್ಯಾರ್ಥಿಗಳಿಗೆ ಅಲ್ಲಿಯೇ ಪಾಠಪ್ರವಚನದ ಪ್ರಾರಂಭವಾಯಿತು. ಮತ್ತು ಊಟದ ವ್ಯವಸ್ಥೆಯೂ ಆಯಿತು. ಕಾಲಕ್ರಮದಲ್ಲಿ ಈಗಿನ ಕಟ್ಟಡಕ್ಕೆ ಪಾಠಶಾಲೆಯು ವರ್ಗಾವಣೆಯಾಯಿತು. 'ಶ್ರೀಮನ್ ಮಹಾರಾಜ ಸಂಸ್ಕೃತ ಮಹಾಪಾಠಶಾಲಾ' ಎಂದು ನಾಮಕರಣವಾಯಿತು. ಸಂಸ್ಕೃತ ಪ್ರಸಿದ್ಧ ಪರೀಕ್ಷೆಗಳನ್ನು ನಡೆಸುವ ಹೊಣೆಗಾರಿಕೆಯು ಮೈಸೂರು ರಾಜ್ಯ ಸಂಸ್ಕೃತ ಶಿಕ್ಷಣ ಮತ್ತು ಪರೀಕ್ಷಾ ಮಂಡಳಿಯದಾಗಿತ್ತು. ಶಾಸ್ತ್ರಭಾಗಗಳಿಗೆ ಸಂಬಂಧಿಸಿದಂತೆ ಪ್ರಥಮಾ, ಕಾವ್ಯ, ಸಾಹಿತ್ಯ, ವಿದ್ವನ್ಮಧ್ಯಮ, ವಿದ್ವದುತ್ತಮ ಪರೀಕ್ಷೆಗಳೂ ವೇದ ವಿಭಾಗಕ್ಕೆ ಸಂಬಂಧಿಸಿದಂತೆ ಪ್ರಥಮಾ, ಪ್ರವೇಶ, ಮೂಲ, ಕ್ರಮಾಂತ (ಮಧ್ಯಮ) ಮತ್ತು ಘನಾಂತ (ಉತ್ತಮ) ಪರೀಕ್ಷೆಗಳು ನಡೆಯುತ್ತಿದ್ದವು. ವಿದ್ವತ್ಪದವೀಪ್ರದಾನ ಸಮಾರಂಭವು ಅರಮನೆಯಲ್ಲಿಯೇ ದಸರಾ ಸಂದರ್ಭದಲ್ಲಿ ಸರಸ್ವತೀಪೂಜೆಯ ದಿನದಂದು ಮಹಾರಾಜರವರ ಅಮೃತಹಸ್ತದಿಂದ ನೆರವೇರುತ್ತಿತ್ತು. ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದವರಿಗೆ ಎರಡು ಝರಿ ಶಾಲು, ಗೌರವಧನ ನೀಡಲಾಗುತ್ತಿತ್ತು. ದ್ವಿತೀಯ ಶ್ರೇಣಿ ಹಾಗೂ ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾದವರಿಗೆ ಯೋಗ್ಯರೀತಿಯಲ್ಲಿ ಗೌರವಧನವನ್ನು ನೀಡಲಾಗುತ್ತಿತ್ತು. ಇದಕ್ಕಾಗಿ ಅನೇಕ ದಾನಿಗಳು ಅವರವರ ಹೆಸರುಗಳಲ್ಲಿ ದತ್ತಿಗಳನ್ನು ಇಟ್ಟಿದ್ದರು. ಇದರಿಂದ ಬರುವ ಬಡ್ಡಿಹಣದಲ್ಲಿ ದಾನಿಗಳ ಅಪೇಕ್ಷೆಯಂತೆ ನಗದಾಗಿ ಬಹುಮಾನ ಕೊಡಲಾಗುತ್ತಿತ್ತು.

ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಮತತ್ರಯದವರಿಗೆ ಮಾತ್ರ ಅಭ್ಯಾಸದ ಅವಕಾಶವಿರುತ್ತಿತ್ತು. ಇತರ ಮತೀಯರಿಗೂ ಕೂಡ ಸಂಸ್ಕೃತ ವೇದಾದಿಗಳ ಅಧ್ಯಯನದ ವ್ಯವಸ್ಥೆಯಾಗಬೇಕೆಂಬ ಉದ್ದೇಶದಿಂದ ಬೆಂಗಳೂರಿನಲ್ಲಿ ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯನ್ನು ಪ್ರಾರಂಭಿಸಲಾಯ್ತು. ಈ ವೇಳೆಗಾಗಲೇ ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ಶ್ರೀ ಅಟವೀ ಸ್ವಾಮಿಗಳವರ ಕಾಲದಲ್ಲಿ ಅವರ ಅಪೇಕ್ಷೆಯಂತೆ ಸಂಸ್ಕೃತ ವೇದ ಪಾಠಶಾಲೆ ಪ್ರಾರಂಭಗೊಂಡು ನಡೆಯುತ್ತಿತ್ತು. ಅನಂತರ ಶ್ರೀ ಉದ್ಧಾನ ಶಿವಯೋಗಿಗಳವರ ಪ್ರಯತ್ನದಿಂದ ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ–ವೇದ ಮಹಾಪಾಠಶಾಲೆಯು ಪ್ರಾರಂಭಗೊಂಡಿತು. ಒಟ್ಟಾರೆ ಮೈಸೂರು ಸಂಸ್ಥಾನದಲ್ಲಿ ಕೇವಲ ಮೂರು ಸಂಸ್ಕೃತ ಮಹಾಪಾಠಶಾಲೆಗಳು ಸಾಂಗವಾಗಿಯೇ ನಡೆಯುತ್ತಿದ್ದವು. ಪ್ರಸಿದ್ಧ ಪರೀಕ್ಷೆಗಳ ಕೇಂದ್ರವು ವಿದ್ವನ್ಮಧ್ಯಮಾ, ವಿದ್ವದುತ್ತಮಾ ಪರೀಕ್ಷೆಗಳಿಗಾಗಿ ಮೈಸೂರು, ಬೆಂಗಳೂರು ಕಾಲೇಜುಗಳಲ್ಲಿ ಮಾತ್ರ ಇತ್ತು. ಶ್ರೀ ಸಿದ್ಧಗಂಗಾ ಕ್ಷೇತ್ರದ ಅಭ್ಯರ್ಥಿಗಳು ಹತ್ತಿರದ ನಗರವಾದ ಬೆಂಗಳೂರಿನಲ್ಲಿ ಪರೀಕ್ಷೆ ಪಡೆಯುತ್ತಿದ್ದರು. ಶ್ರೀ ಮಹಾಂತರ ಮಠದಲ್ಲಿ ಭೋಜನ ವ್ಯವಸ್ಥೆ ಆಗುತ್ತಿತ್ತು. ಹೀಗೆ ಕ್ರಮಬದ್ಧವಾಗಿ ಕಾಲೇಜುಗಳ ವ್ಯವಸ್ಥೆ ಹಾಗೂ ಸಂಸ್ಕೃತ ಪಾಠಶಾಲೆಗಳ ವ್ಯವಸ್ಥೆ ಸಾಂಗವಾಗಿಯೇ ಸಾಗುತ್ತಿತ್ತು.

ಇದೇ ವೇಳೆಗೆ 1947ರಲ್ಲಿ ಸ್ವಾತಂತ್ರ್ಯವು ಬರಲಾಗಿ ಅಲ್ಪಸ್ವಲ್ಪ ಮಾರ್ಪಾಡು ಸಂಸ್ಕೃತ ವಿದ್ಯಾಭ್ಯಾಸದಲ್ಲಿ ತಲೆದೋರಿತು. ಅರಮನೆಯ ಆಡಳಿತಕ್ಕೆ ಒಳಪಟ್ಟಿದ್ದ ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜಿನ ಶೈಕ್ಷಣಿಕ ವ್ಯವಸ್ಥೆಯು 1949ರಲ್ಲಿ ಘನ ಸರ್ಕಾರದವರ ವಶಕ್ಕೆ ಹಸ್ತಾಂತರಗೊಂಡಿತು. ಆ ಬಳಿಕವೇ ಮೈಸೂರಿನ ಸಂಸ್ಕೃತ ಕಾಲೇಜಿನಲ್ಲಿ ಇತರ ಮತೀಯರಿಗೂ ಸಂಸ್ಕೃತಾಧ್ಯಯನಕ್ಕೆ ಬಾಗಿಲು ತೆರೆಯಿತು. ಹಲವಾರು ಶಾಸ್ತ್ರಗಳು ಹೊಸ ಬೋಧನ ವಿಷಯವಾಗಿ ಸೇರ್ಪಡೆಗೊಂಡವು. ಕೇವಲ ಬೆಂಗಳೂರು ಕಾಲೇಜಿನಲ್ಲಿ ನಡೆಯುತ್ತಿದ್ದ ಶಕ್ತಿವಿಶಿಷ್ಟಾದ್ವೈತ ವೇದಾಂತದ ಅಧ್ಯಯನವು ಮೈಸೂರಿನ ಕಾಲೇಜಿನಲ್ಲಿಯೂ ಪ್ರಾರಂಭಗೊಂಡಿತು. ಋಗ್ವೇದ, ಕೃಷ್ಣಯಜುರ್ವೇದ, ಶುಕ್ಲಯಜುರ್ವೇದ, ಸಾಮವೇದಗಳ ಜೊತೆಯಲ್ಲಿ ವೀರಶೈವವೇದದ ಪಾಠ–ಪ್ರವಚನಗಳು ನಡೆಯದೇ ಇದ್ದರೂ, ಪರೀಕ್ಷೆ ಪಡೆಯುವ ಅವಕಾಶವನ್ನು ಕಲ್ಪಿಸಲಾಯಿತು. ಶೈವ, ತಂತ್ರಸಾರ, ಪಾಂಚರಾತ್ರ, ವೈಖಾನಸ ಆಗಮಗಳ ಜೊತೆಗೆ ವೀರಶೈವಾಗಮದ ಅಧ್ಯಯನದ ವ್ಯವಸ್ಥೆಯೂ ಆರಂಭವಾಗಿ ಕಡೆಗೆ ಜೈನಾಗಮವೂ ಸೇರ್ಪಡೆಗೊಂಡಿತು.

ಹೀಗೆ ಶಿಕ್ಷಣವು ಸುವ್ಯವಸ್ಥಿತವಾಗಿ ನಡೆಯುತ್ತಾ ಇದ್ದಿತಾದರೂ ಪದವೀಪ್ರದಾನ ಸಮಾರಂಭವು ಅರಮನೆಯಲ್ಲಿ ನಡೆಯದೇ ಸಂಸ್ಕೃತ ಕಾಲೇಜುಗಳಲ್ಲಿ ನಡೆಯುವಂತೆ ವ್ಯವಸ್ಥೆ

ಮಾಡಲಾಯಿತು. ಇದು ಬಹುಶಃ 1955–56ನೇ ಸಾಲಿನಿಂದ ಕಾರ್ಯರೂಪಕ್ಕೆ ಬಂದಿತು. ಮೊದಲಿಗೆ ಮೈಸೂರು ಸಂಸ್ಕೃತ ಕಾಲೇಜಿನಲ್ಲಿ ಪದವೀಪ್ರದಾನ ಸಮಾರಂಭವು ನಡೆಯಿತು. ಅನಂತರ ಬೆಂಗಳೂರಿನ ಕಾಲೇಜಿನಲ್ಲಿ ನಡೆಯಿತು.

ಇದಕ್ಕೂ ಮುನ್ನ ಸಾಹಿತ್ಯ ಪ್ರಸಿದ್ಧ ಪರೀಕ್ಷೆ ಪಡೆದವರಿಗೂ ಸಹ ಬಹುಮಾನಧನದ ವಿತರಣೆಯ ವ್ಯವಸ್ಥೆಯೂ ಇತ್ತು. ಅನಂತರ ಅದೂ ನಿಂತುಹೋಯಿತು.

ಆಗಿನ ಪರೀಕ್ಷೆಗಳು ಹೆಚ್ಚುಕಡಿಮೆ ಒಂದು ತಿಂಗಳ ಕಾಲ ನಡೆಯುತ್ತಿದ್ದವು. ವಿಶಿಷ್ಟವಾಗಿ ಮಧ್ಯಮ ಮತ್ತು ಉತ್ತಮ ಪರೀಕ್ಷೆಗಳು ಹೀಗೆ ನಡೆಯುತ್ತಿದ್ದವು. ಮಧ್ಯಮ ಪರೀಕ್ಷೆಗೆ ಎಂಟು ಪತ್ರಿಕೆಗಳು ಮತ್ತು ಎಂಟು ವಾಚಾ ಪರೀಕ್ಷೆಗಳು, ಉತ್ತಮ ಪರೀಕ್ಷೆಗೆ ಆರು ಪತ್ರಿಕೆಗಳು ಮತ್ತು ಆರು ವಾಚಾ ಪರೀಕ್ಷೆಗಳು –ಹೀಗೆ ಕನಿಷ್ಠ ಇಪ್ಪತ್ತರಿಂದ ಇಪ್ಪತ್ತೈದು ದಿನಗಳವರೆಗೆ ಪರೀಕ್ಷೆಗಳು ನಡೆಯುತ್ತಿದ್ದವು. ಈ ಎಲ್ಲಾ ಪರೀಕ್ಷೆಗಳೂ ಸಹ ಮೈಸೂರು ರಾಜ್ಯ ಸಂಸ್ಕೃತ ಶಿಕ್ಷಣ ಮತ್ತು ಪರೀಕ್ಷಾ ಮಂಡಲಿಯ ಆಶ್ರಯದಲ್ಲಿ ನಡೆಯುತ್ತಿದ್ದವು.

ವಿದ್ಯಾರ್ಥಿವೇತನದ ವ್ಯವಸ್ಥೆಯೂ ಸಹ ಬಹಳ ಉತ್ತಮ ರೀತಿಯಲ್ಲಿ ಇತ್ತು. ಸಂಸ್ಕೃತ, ವೇದಾದಿಗಳನ್ನು ಅಧ್ಯಯನ ಮಾಡುತ್ತಿದ್ದ ಎಲ್ಲ ವಿದ್ಯಾರ್ಥಿಗಳಿಗೂ ತರಗತಿಗಳಿಗೆ ತಕ್ಕಂತೆ ವಿದ್ಯಾರ್ಥಿವೇತನವು ದೊರೆಯುತ್ತಿತ್ತು. ಅನಂತರ ಅದಕ್ಕೂ ಸ್ವಲ್ಪ ಧಕ್ಕೆ ಉಂಟಾಯಿತು.

ಆಗಿನ ಘನ ಸರ್ಕಾರಕ್ಕೆ ಎಂತಹ ಕೆಟ್ಟ ಬುದ್ಧಿ ಬಂತೋ ಗೊತ್ತಿಲ್ಲ. ಅಥವಾ ಸಂಸ್ಕೃತ ಅಧ್ಯಯನಕ್ಕೆ ಶನಿದಶೆ, ರಾಹುದಶೆ, ಕೇತುದಶೆಗಳು ಒಟ್ಟಿಗೇ ಏಕಕಾಲಕ್ಕೇ ಪ್ರಾರಂಭವಾಯಿತೋ ಏನೋ? ಘನಸರ್ಕಾರದವರು ಸಂಸ್ಕೃತ ಬೋರ್ಡನ್ನು ವಜಾ ಮಾಡಿ, ಸಂಸ್ಕೃತ ಮಹಾಪಾಠಶಾಲೆಗಳ, ಪಾಠಶಾಲೆಗಳ ಪ್ರಸಿದ್ಧ ಪರೀಕ್ಷೆಗಳ ಮೇಲ್ವಿಚಾರಣೆಯನ್ನು ಪ್ರೌಢಶಿಕ್ಷಣ ಪರೀಕ್ಷಾ ಮಂಡಲಿಯ ವಶಕ್ಕೆ ಒಪ್ಪಿಸಿದರು. ಆಗ ಪ್ರಾರಂಭವಾಯಿತು ಅವ್ಯವಸ್ಥೆ. ವಿದ್ವತ್ಪದವಿಯ ಪ್ರಮಾಣಪತ್ರಗಳಿಗೆ ಆಂಧ್ರ–ತಮಿಳುನಾಡುಗಳಲ್ಲಿ ಮಾನ್ಯತೆ ದೊರೆಯಲಿಲ್ಲ. ಏಕೆಂದರೆ ಪ್ರೌಢಶಿಕ್ಷಣ ಪರೀಕ್ಷಾ ಮಂಡಲಿಯು ಪದವಿಗಳಿಗೆ ಸಂಬಂಧಿಸಿದ ಪ್ರಮಾಣಪತ್ರಗಳನ್ನು ವಿತರಣೆ ಮಾಡುವ ಅರ್ಹತೆ ಇರುವುದಿಲ್ಲವೆಂಬುದೇ ಕಾರಣ. ಪದವಿಗಳ ಪ್ರದಾನವು ಕೇವಲ ವಿಶ್ವವಿದ್ಯಾಲಯಗಳಿಗೆ ಮಾತ್ರ ಸಾಧ್ಯವಾಗುವಂತಹದು ಎಂದು ತಿರಸ್ಕರಿಸಿದವು.

ಮತ್ತೆ ಸಂಸ್ಕೃತ ಬೋರ್ಡಿನ ಪ್ರಾರಂಭವಾಗಬೇಕು, ಸಂಸ್ಕೃತ ಮಹಾಪಾಠಶಾಲೆಗಳ ಮತ್ತು ಪಾಠಶಾಲೆಗಳ ಆಡಳಿತ ವ್ಯವಸ್ಥೆಯು ಈ ಬೋರ್ಡಿನ ಆಶ್ರಯದಲ್ಲಿಯೇ ನಡೆಯಬೇಕು ಎಂದು ನಾವು ಬಹಳವಾಗಿ ಹೋರಾಟವನ್ನು ಮಾಡಿದೆವು. ಆದರೂ ನಮ್ಮ ಪ್ರಯತ್ನಕ್ಕೆ ಸಾಫಲ್ಯ ದೊರೆಯಲಿಲ್ಲ. ಈ ಮಧ್ಯೆ ಮೈಸೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸಂಸ್ಕೃತ ಮಹಾಪಾಠಶಾಲೆ ಮತ್ತು ಪಾಠಶಾಲೆಗಳನ್ನು ತರುವ ಪ್ರಯತ್ನವೂ ಕೂಡ ಸಾಗಿತು. ಇದಕ್ಕಾಗಿ ಡಾ. ಜಿ. ಮರುಳಸಿದ್ಧಯ್ಯನವರು, ಶ್ರೀ ದೇ.ಜ.ಗೌ.ರವರು, ಶ್ರೀ ಹಾ.ಮಾ. ನಾಯಕರವರು ಪ್ರಯತ್ನಶೀಲರಾದರು. ಆದರೆ ನೀರಿಗೆ ಪಾಚಿಯೇ ವೈರಿ ಎಂಬಂತೆ, ಪಂಡಿತರಲ್ಲಿಯೇ ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಉಂಟಾದವು. ಏನೆಂದರೆ– ಪ್ರಥಮಾ, ಕಾವ್ಯ ತರಗತಿಗಳು ಹಾಗೆಯೇ ವೇದದ ಪ್ರಥಮಾ, ಪ್ರವೇಶ ತರಗತಿಗಳು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರಲು ಹೇಗೆ ಸಾಧ್ಯ? ಎಂಬ ಇತ್ಯಾದಿ ಕಟುವಾದ ಟೀಕೆಗಳು, ಆಕ್ಷೇಪಗಳು ಹುಟ್ಟಿಕೊಂಡವು. ಇದರ ಪರಿಣಾಮವಾಗಿ ಆ ಪ್ರಯತ್ನವೂ ಸಹ ಅಲ್ಲಿಗೇ ನಿಂತುಹೋಯಿತು.

ಬಳಿಕ ಪ್ರಥಮಾ, ಕಾವ್ಯ ತರಗತಿಗಳನ್ನು ಮಾತ್ರ ಪಾಠಶಾಲೆಗಳಿಗೆ ವಹಿಸುವುದು, ಸಾಹಿತ್ಯ ಮತ್ತು ಆ ನಂತರದ ವಿದ್ವತ್ ತರಗತಿಗಳನ್ನು ಮಹಾಪಾಠಶಾಲೆಗಳಲ್ಲಿ ನಡೆಸುವುದು ಮತ್ತು ಮಹಾಪಾಠಶಾಲೆಗಳನ್ನು ಉನ್ನತ ದರ್ಜೆಗೆ ಏರಿಸುವುದು ಎಂಬ ಅಭಿಪ್ರಾಯಗಳೊಂದಿಗೆ ಈ ವ್ಯವಸ್ಥೆಯೂ ಜಾರಿಗೆ ಬಂದಿತು. ಒಂದು ರೀತಿಯಲ್ಲಿ ಇದು ವ್ಯವಸ್ಥೆಯೇ ಆಗಿರದೆ ಅವ್ಯವಸ್ಥೆಯ ವ್ಯವಸ್ಥೆಯೇ ಆಗಿತ್ತೆಂದು ಹೇಳಬಹುದು. ಈ ವ್ಯವಸ್ಥೆಯೂ ಸಹ ಕೇವಲ ಕೆಲವೇ ವರ್ಷಗಳು ನಡೆಯಿತು. ಪ್ರಥಮಾ, ಕಾವ್ಯ ತರಗತಿಗಳು ಇಲ್ಲದ್ದರಿಂದ ಸಾಹಿತ್ಯಾದಿ ತರಗತಿಗಳಿಗೆ ಸ್ವಾಭಾವಿಕವಾಗಿಯೇ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಲಾರಂಭಿಸಿತು. ಎಸ್.ಎಸ್.ಎಲ್.ಸಿ.ಯಲ್ಲಿ ಸಂಸ್ಕೃತ ಭಾಷೆಯನ್ನು ಅಭ್ಯಾಸ ಮಾಡಿದವರು ಸಾಹಿತ್ಯ ತರಗತಿಗೆ ಪ್ರವೇಶಾರ್ಹರೆಂಬ ನಿಯಮವಿರುತ್ತದೆ. ಆದರೆ ಪ್ರೌಢಶಾಲೆಯಲ್ಲಿ ಲಘುಸಿದ್ಧಾಂತ ಕೌಮುದಿಯ ಪಾಠದ ವ್ಯವಸ್ಥೆ ಇರುವುದಿಲ್ಲ. ಇದರಿಂದಾಗಿ ವ್ಯಾಕರಣ ಶಾಸ್ತ್ರದ ಪ್ರಜ್ಞೆ ಇಂತಹವರಿಗೆ ಅಷ್ಟಾಗಿ ಇರುವುದಿಲ್ಲವಾದ್ದರಿಂದ ಸಿದ್ಧಾಂತಕೌಮುದಿಯ ಪಾಠದ ಅನುಸರಣೆಯು ಬಹಳ ಕಷ್ಟಸಾಧ್ಯದ ಕಾರ್ಯವಷ್ಟೆ! ಸಾಹಿತ್ಯ ಪ್ರಸಿದ್ಧ ಪರೀಕ್ಷೆಯ ಮಕ್ಕಳಿಗೆ ಶ್ರಮಸಾಧ್ಯದ ಕಾರ್ಯವಿದಾಯಿತು. ಮಹಾಪಾಠಶಾಲೆಗಳನ್ನು ಮೇಲ್ದರ್ಜೆಗೆ ಏರಿಸುವ ಕಾರ್ಯವೂ ಆಗಲಿಲ್ಲ. ಕಾಲಕ್ರಮೇಣ ಮತ್ತೆ ಪ್ರಥಮಾ, ಕಾವ್ಯ ತರಗತಿಗಳನ್ನು ಮಹಾಪಾಠಶಾಲೆಗಳಲ್ಲಿ ಆರಂಭಿಸಲಾಯಿತು.

ಪದವೀಪ್ರದಾನ ಸಂದರ್ಭಗಳಲ್ಲಿ ಸ್ನಾತಕರಿಗೆ ಝರಿಶಾಲು, ಬಹುಮಾನಾದಿಗಳ ವಿತರಣೆಯು ಆಗುತ್ತಿತ್ತಷ್ಟೆ! ಪ್ರೌಢಶಿಕ್ಷಣ ಪರೀಕ್ಷಾ ಮಂಡಲಿಯ ಆಶ್ರಯದಲ್ಲಿ ಉರ್ದುಮುನ್ಷಿ, ಹಿಂದೀ ವಿದ್ವಾನ್, ಕನ್ನಡ ಪಂಡಿತ್, ಸಂಗೀತ, ನೃತ್ಯ, ಟೈಪ್‌ರೈಟಿಂಗ್,

ಟಿಸಿಎಲ್, ಟಿಸಿಎಚ್ ಇತ್ಯಾದಿ ಎಲ್ಲ ಪರೀಕ್ಷೆಗಳೂ ನಡೆಯುತ್ತಿದ್ದವಷ್ಟೆ! ಪದವೀಪ್ರದಾನ ಸಂದರ್ಭದಲ್ಲಿ ನೀಡಲಾಗುತ್ತಿದ್ದ ಶಾಲು–ಇತ್ಯಾದಿಗಳ ಬಗ್ಗೆ, ಗೌರವಧನದ ಬಗ್ಗೆ ಬಹಳವಾಗಿಯೇ ಬೇರೆ ಬೇರೆ ವಿಷಯಗಳವರಿಂದ ಟೀಕೆ, ಟಿಪ್ಪಣಿಗಳು ಕೇಳಿಬಂದವು. ಹೇಗೋ, ಎಲ್ಲವೂ ಒಂದು ಸಮಾಧಾನವಂತೂ ಇತ್ತು.

ವಿದ್ವತ್ಪದವೀಧರರು ಕೇವಲ ಪ್ರೌಢಶಾಲೆಗಳಲ್ಲಿ ಅಧ್ಯಾಪಕ ವೃತ್ತಿಯನ್ನು ನಡೆಸಬೇಕಾದ ಪ್ರಸಂಗವುಂಟಾಯಿತು. ಸಂಸ್ಕೃತ ಕಾಲೇಜುಗಳಲ್ಲಿ ಸೀಮಿತರಾದ ಸ್ಥಾನಗಳು ಇರುವುದರಿಂದ ಅಲ್ಲಿಯೂ ವೃತ್ತಿಯು ದೊರೆಯುವುದು ಸುಲಭದ ಕಾರ್ಯವಂತೂ ಅಲ್ಲ.

ಇಷ್ಟೇ ಅಲ್ಲ, ವಿದ್ವಾಂಸರಲ್ಲಿ ಅನೇಕ ಮಂದಿ ಸಂಶೋಧನೆಯಲ್ಲಿ ನೈಪುಣ್ಯವುಳ್ಳವರೂ ಇದ್ದಾರೆ. ಅವರಿಗೆ ಸೂಕ್ತವಾದ ಅವಕಾಶವೂ ಸಹ ದುರ್ಲಭವಾಗಿತ್ತು. ಸಂಶೋಧನ ಕೇಂದ್ರಗಳಲ್ಲಿ ಮಾತ್ರ ಸೀಮಿತ ರೀತಿಯಲ್ಲಿ ಕೆಲವರಿಗೆ ಮಾತ್ರ ಅವಕಾಶ ದೊರೆಯುವುದಾಗಿತ್ತು.

ಇಷ್ಟೆಲ್ಲಾ ಅವ್ಯವಸ್ಥೆಗಳ ಆಗರವಿರುವಾಗ ನಮ್ಮೆಲ್ಲರ ಪುಣ್ಯವಶಾತ್, ಸಂಸ್ಕೃತದ ಅಧ್ಯಯನಕ್ಕೆ ಶುಕ್ರದಶೆಯು ಪ್ರಾರಂಭವಾಯಿತೋ ಏನೋ! ಎಂಬಂತೆ, ಬಹಳ ವರ್ಷಗಳ ಬೇಡಿಕೆಯಾಗಿದ್ದ ಸಂಸ್ಕೃತ ವಿಶ್ವವಿದ್ಯಾಲಯದ ಉಗಮವಾಯಿತು. ಸನ್ಮಾನ್ಯ ಕುಲಪತಿಗಳವರು, ಸನ್ಮಾನ್ಯ ಕುಲಸಚಿವರು ಇತ್ಯಾದಿ ಎಲ್ಲ ದಕ್ಷ ಅಧಿಕಾರಿ ವರ್ಗದವರ ಪಾದರಸದಂತಹ ಚಟುವಟಿಕೆಗಳಿಂದಾಗಿ ಪ್ರಸಿದ್ಧ ಪರೀಕ್ಷೆಗಳು ಅತ್ಯಂತ ಸುಗಮವಾಗಿಯೇ ನಡೆದವು. ಹಸುವಿನ ಕರುವು ಹುಟ್ಟಿದ ಸ್ವಲ್ಪಹೊತ್ತಿನಲ್ಲಿಯೇ ನೆಗೆದಾಡುವಂತೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಶಿಶುವು ದಕ್ಷತೆಯಿಂದಲೇ ತನ್ನ ಕಾರ್ಯವನ್ನು ನಿರ್ವಹಿಸುತ್ತಿರುವುದು ಅತ್ಯಂತ ಆನಂದದ ಸಂಗತಿಯೇ ಆಗಿರುತ್ತದೆ.

**❑ ಬಿ. ರಾಜಶೇಖರಯ್ಯ**
ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕ

## e-ಗ್ರಂಥಾಲಯದ ಉಪಯೋಗ

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**ವು ನೂತನ ಯೋಜನೆಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ **e-Library**ಯನ್ನು ಜಾರಿಗೊಳಿಸಿದೆ. ಅದರಂತೆ ಪ್ರತಿ ಬಾರಿಯ ವಾರ್ತಾಪತ್ರದಲ್ಲೂ ಇದಕ್ಕೆ ಸಂಬಂಧಿಸಿದಂತೆ ಲೇಖನಗಳನ್ನು ಪ್ರಕಟಿಸುತ್ತಿದೆ.

**ಪ್ರ:** ಇಂಟರ್‌ನೆಟ್‌ನಲ್ಲಿ ಯಾವ ಮಾದರಿಯ ಫೈಲ್‌ಗಳ ಉಪಲಬ್ಧಿಯಿದೆ ?

**ಉ:** ಪ್ರಸಕ್ತ ಅನೇಕ ಸಂಸ್ಕೃತಾಭಿಮಾನಿಗಳು ತಾವು ಎಡಿಟ್ ಮಾಡಿದ ಸಂಸ್ಕೃತ ಗ್ರಂಥಗಳನ್ನು ಅನೇಕ ವಿಧಗಳಲ್ಲಿ ಸ್ಥಿರೀಕರಿಸಿರುತ್ತಾರೆ. ಇಂದು .txt .doc .pdf .odt .brh .jpeg ಇವೇ ಮೊದಲಾದ ವಿಧಗಳಲ್ಲಿ ಇವುಗಳನ್ನು ಅಂತರ್ಜಾಲದಲ್ಲಿ ಹಾಕಿದ್ದಾರೆ. ಈ ಎಲ್ಲಾ ವಿಧವಾದ ಫೈಲ್‌ಗಳಲ್ಲೂ ಸಹ ಅನೇಕ ವಿಧವಾದ ಕೋಡಿಂಗ್ ಸಿಸ್ಟಮ್‌ಗಳನ್ನು ಉಪಯೋಗಿಸಿ, ಅಂದರೆ ಸಂಸ್ಕೃತಕ್ಕೆ ಸಂಬಂಧಪಟ್ಟ ಸಾಫ್ಟ್‌ವೇರ್‌ಗಳನ್ನು ಉಪಯೋಗಿಸಿ ತಯಾರಿಸಿರುತ್ತಾರೆ. ಅವುಗಳಲ್ಲಿ BARAHA, I-LEAP, Shree-Lipi ಮೊದಲಾದವುಗಳು ಪ್ರಮುಖವಾಗಿವೆ. ಇಂದು ವಿಶ್ವದಾದ್ಯಂತ LINUX, WINDOWS ಅಥವಾ ಬೇರಾವುದೇ ಆಪರೇಟಿಂಗ್ ಸಿಸ್ಟಮ್‌ಗಳೊಂದಿಗೆ ಉಚಿತವಾಗಿ ಸಿಗುವ ಯಾರೂ ಉಪಯೋಗಿಸಲು ಸುಲಭವಾದ ಯೂನಿಕೋಡ್(UNICODE)ರೂಪದಲ್ಲೂ ಇದನ್ನು ಸಿದ್ಧಗೊಳಿಸಬಹುದು.

**ಪ್ರ:** ಯಾವ ಮಾದರಿಯ ಫೈಲ್‌ಗಳು E-**ಗ್ರಂಥಾಲಯ**ದ ಉಪಯೋಗಕ್ಕೆ ಹೆಚ್ಚು ಸೂಕ್ತ ?

**ಉ:** ಮೇಲ್ಕಾಣಿಸಿದ ಎಲ್ಲ ಮಾದರಿಯ ಫೈಲ್‌ಗಳೂ ಒಂದಲ್ಲ ಒಂದು ರೀತಿಯಿಂದ ಉಪಯುಕ್ತವೇ ಆಗಿವೆ. ಆದರೂ E-**ಗ್ರಂಥಾಲಯ**ದ ಬಹುಮುಖ್ಯ ಉಪಯೋಗವಾದ ಹುಡುಕಾಟಕ್ಕೆ .txt ಫೈಲುಗಳು ಹೆಚ್ಚು ಉಪಯುಕ್ತ. .doc .odt ಫೈಲುಗಳಲ್ಲೂ ಹುಡುಕಾಟ ಸಾಧ್ಯ, ಆದರೆ .txt ಫೈಲ್‌ಗಳಷ್ಟು ಸಾಧ್ಯವಿಲ್ಲ. ಇನ್ನು **.pdf** ರೂಪದ ಫೈಲುಗಳು ಮಾತ್ರ ಸ್ವಲ್ಪ ಕಠಿಣ. ಇವು ಚಿತ್ರದಂತೆ ಪರಿಗಣಿಸಲ್ಪಟ್ಟಿವೆ. ಆದರೂ ಅದರಲ್ಲಿ ಉಪಯೋಗಿಸಿದ FONT ನಮ್ಮ ಬಳಿ ಇದ್ದರೆ ಆ ಫೈಲಿನ ಒಳಗೇ ಹುಡುಕಬಹುದು. ಆದರೆ .jpeg ಎಂಬ ಫೈಲುಗಳು ಶುದ್ಧ ಚಿತ್ರಗಳು. ಇವುಗಳಲ್ಲಿ ಹುಡುಕಾಟ ಅಸಾಧ್ಯ. ಇನ್ನು I-LEAP, Shree-Lipi ಮೊದಲಾದಂತಹ ಸಾಫ್ಟ್‌ವೇರ್‌ಗಳನ್ನು ಉಪಯೋಗಿಸಿ ತಯಾರಿಸಿದಂತಹ ಫೈಲ್‌ಗಳನ್ನು ಅಂತಹ ಸಾಫ್ಟ್‌ವೇರ್ ಉಳ್ಳವರು ಮಾತ್ರ ಉಪಯೋಗಿಸಬಹುದಾಗಿದೆ.

# ‘ಆಧುನಿಕ ವಿಜ್ಞಾನದಿಂದ ಮನಸ್ಸು, ದೇಹ ವಿಕೃತ’



ಶಾಸ್ತ್ರಪರಂಪರೆ ಮತ್ತು ವಿಜ್ಞಾನ ಕುರಿತ ವಿಚಾರ ಸಂಕಿರಣದ ಉದ್ಘಾಟನೆ ಕುಲಪತಿಗಳಿಂದ.

ಸಮಾಜಕ್ಕೆ ಸಾಕಷ್ಟು ಉಪಯೋಗ ನೀಡಿದಷ್ಟೇ ಜೀವನದ ನೆಮ್ಮದಿ ಹಾಳುಮಾಡಿರುವ ಆಧುನಿಕ ವಿಜ್ಞಾನ ಮನುಷ್ಯನ ಮನಸ್ಸು, ದೇಹ, ನಡೆ–ನುಡಿ ವಿಕೃತಗೊಳಿಸಿದೆ. ವ್ಯಕ್ತಿಯ ಸಹನೆ, ಸಹಯೋಗ, ಸಮಭಾವ ಇಲ್ಲದಂತಾಗಿ ಸದ್ಯ ಆತಂಕಕಾರಿ ಸ್ಥಿತಿ ಉಂಟಾಗಿದೆ ಎಂದು ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರು ಅಭಿಪ್ರಾಯಪಟ್ಟರು.

ಅವರು 07.12.11ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಧಾರವಾಡದ ಸಿ.ಎಲ್.ವೈ. ಸಂಸ್ಕೃತ ಸ್ನಾತಕ–ಸ್ನಾತಕೋತ್ತರ ಅಧ್ಯಯನ ಕೇಂದ್ರ ಜಂಟಿಯಾಗಿ ಧಾರವಾಡದ ವನವಾಸಿ ರಾಮಮಂದಿರದಲ್ಲಿ ಏರ್ಪಡಿಸಿದ್ದ 2 ದಿನಗಳ ಭಾರತೀಯ ಸಂಸ್ಕೃತ ಶಾಸ್ತ್ರಪರಂಪರೆ, ವಿಜ್ಞಾನ ಕುರಿತ ವಿಚಾರಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಆಧುನಿಕ ವಿಜ್ಞಾನದ ಜೀವನ ವಿಧಾನವು ವ್ಯಕ್ತಿಯ ಜೀವನ ಸ್ವಾಸ್ಥ್ಯ ಹಾಳುಮಾಡುತ್ತಿದೆ. ಪ್ರಾಚೀನ ವಿಜ್ಞಾನ ಜೀವನಕ್ಕೆ ಸ್ವಾಸ್ಥ್ಯ ನೀಡುತ್ತದೆ. ಜೀವನದ ಸ್ವರೂಪ ಎಳೆಎಳೆಯಾಗಿ ಬಿಡಿಸಿ ಪರಿಸರಕ್ಕೆ ತಕ್ಕಂತೆ ಇದೇ ರೀತಿ ಬದುಕು ಎಂದು ಮಾರ್ಗದರ್ಶನ ಮಾಡುತ್ತಿದೆ. ಯಾರೂ ಪ್ರಾಚೀನ ವಿಜ್ಞಾನದ ಬಗ್ಗೆ ಚಿಂತಿಸುತ್ತಿಲ್ಲ ಎಂದರು.

**ವಿಜ್ಞಾನ, ಕಲೆ, ಸಾಹಿತ್ಯ:** ವ್ಯಕ್ತಿಗೆ ವಿಜ್ಞಾನ, ಕಲೆ, ಸಾಹಿತ್ಯವಿಲ್ಲದೆ ಬದುಕಲಾಗುವುದಿಲ್ಲ. ಭಾರತೀಯ ಸಂಸ್ಕೃತಿ ಈ ಮೂರು ಪರಂಪರೆಗಳನ್ನು ಕೈಬಿಟ್ಟು ಯಾವುದನ್ನು ಸ್ವೀಕರಿಸಲಾಗದ ಸ್ಥಿತಿಯಿಂದ ಆಧುನಿಕ ಜೀವನ ಪದ್ಧತಿಗೆ ಒಗ್ಗೂಡಿದೆ. ಜಾಗತೀಕರಣ ವಿಜ್ಞಾನದ ಮೇಲೆ ಹಕ್ಕು ಚಲಾಯಿಸಿದೆ. ಇದು ಆತಂಕಕಾರಿ ಬೆಳವಣಿಗೆ. ಪ್ರಾಚೀನ ಸಾಹಿತ್ಯ, ಕಲೆ, ವಿಜ್ಞಾನದ ಬಗ್ಗೆ ಅರ್ಥೈಸಿ ಜನರಿಗೆ ಮುಟ್ಟಿಸುವ ಕಾರ್ಯ ಸಂಸ್ಕೃತ ವಿಶ್ವವಿದ್ಯಾಲಯ ಮಾಡುತ್ತಿದೆ. ಪ್ರಾಚೀನ ಪರಂಪರೆ ಉಳಿಸಿ – ಬೆಳೆಸಿ ಅನ್ವಯಿಕಗೊಳಿಸಿ, ಸಮಷ್ಠಿ ಜೀವನ ನಡೆಸುವಂತೆ ವಿವಿ ಪ್ರಯತ್ನಿಸುತ್ತಿದೆ ಎಂದರು.

ಸಂಸ್ಕೃತದಲ್ಲಿ ಏನೂ ಇಲ್ಲ ಎನ್ನುತ್ತಾರೆ. ಅವರ ಜ್ಞಾನದ ಕಣ್ಣು ಮುಚ್ಚಿದೆ. ಸಾಹಿತ್ಯ, ಕಲೆ, ದರ್ಶನಗಳ ಪ್ರಕಾರಗಳಲ್ಲಿ ಹೆಚ್ಚು ಕಾರ್ಯವಾಗಿರುವುದು ಸಂಸ್ಕೃತ ಭಾಷೆಯಲ್ಲಿ ಎಂದು ಬಹುತೇಕರಿಗೆ ಗೊತ್ತಿಲ್ಲ. ಖಗೋಳ ವಿಜ್ಞಾನ, ಭೌತವಿಜ್ಞಾನ ಸೇರಿದಂತೆ ವಿಜ್ಞಾನಕ್ಕೆ ಸಂಬಂಧಿಸಿದ ಸಾಕಷ್ಟು ವಿಚಾರಗಳು ಸಂಸ್ಕೃತ ಭಾಷೆಯಲ್ಲೇ ಇವೆ ಎಂದು ಹೇಳಿದರು.

ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯದ ಪ್ರಶಾಸನ ಸಮಿತಿ ಸದಸ್ಯ ಜಯತೀರ್ಥಾಚಾರ್ಯ ಮಳಗಿ ಮಾತನಾಡಿ, ರಾಜ್ಯದ 230 ಪಾಠಶಾಲೆಗಳನ್ನು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರಿಸಿ 40 ಪಾಠಶಾಲೆಗಳನ್ನು ಹೊಸದಾಗಿ ಆರಂಭಿಸಿದ ಮಲ್ಲೇಪುರಂ ವೆಂಕಟೇಶ ಅವರ ಕಾರ್ಯ ಶ್ಲಾಘಿಸಿದರು.

ಪ್ರೊ. ವೆಂಕಟರಮಣ ದೀಕ್ಷಿತ್ ಬರೆದ ‘ಗೆಲುವಿಗೆ ವ್ಯಕ್ತಿತ್ವ ವಿಕಸನವೇ ಮೇರು ಮಂತ್ರ’ ಪುಸ್ತಕವನ್ನು ಮಾಜಿ ಸಚಿವ ಹನುಮಂತಪ್ಪ ಆಲ್ಕೋಡ್ ಬಿಡುಗಡೆ ಮಾಡಿದರು. ಸೂರ್ಯ ನಾರಾಯಣ ಭಟ್ ನಿರೂಪಿಸಿದರು. ಪ್ರಕಾಶ ಪಾಗೋಜಿ ವಂದಿಸಿದರು. ನಿಂಗಪ್ಪ ಮುಗಳಿ ಉಪಸ್ಥಿತರಿದ್ದರು. ಬಳಿಕ ನಡೆದ ಮೊದಲ ಗೋಷ್ಠಿಯಲ್ಲಿ ಡಾ. ವಿ.ಬಿ. ಜೋಶಿ, ಸುರೇಶ ಕೊಪ್ಪರ ಉಪನ್ಯಾಸ ನೀಡಿದರು. ಉಮ್ಮಚಗಿ ನಿವೃತ್ತ ಪ್ರಾಚಾರ್ಯ ಗಜಾನನ ಭಟ್ ಅಧ್ಯಕ್ಷತೆ ವಹಿಸಿದ್ದರು. ಡಾ. ಶ್ರೀನಿವಾಸ, ಸುರೇಶ ಹೆರೂರ ಉಪನ್ಯಾಸ ನೀಡಿದರು.

# ಮೈಸೂರು ವಲಯ ಸಂಸ್ಕೃತೋತ್ಸವ ಹಾಗೂ ಸನ್ಮಾನ ಸಮಾರಂಭ

ಕರ್ನಾಟಕ ರಾಜ್ಯದ ಪ್ರಸಿದ್ಧವಾದ ಮೈಸೂರು ನಗರದಲ್ಲಿ ದಿನಾಂಕ: 01.10.2011ರ ಶನಿವಾರದಂದು ನಗರದ ಹೃದಯ ಭಾಗದಲ್ಲಿರುವ, ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ, ಮೈಸೂರು ವಿಭಾಗ ಸಂಸ್ಕೃತ ಪಾಠಶಾಲಾ ಶಿಕ್ಷಕರುಗಳ ಸಂಘದ ವತಿಯಿಂದ ಸಂಸ್ಕೃತೋತ್ಸವ, ನಿವೃತ್ತ ಶಿಕ್ಷಕರುಗಳಿಗೆ ಸನ್ಮಾನ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ನೆರವೇರಿಸಲಾಯಿತು.

ಕಾರ್ಯಕ್ರಮವು ಪಾಠಶಾಲಾ ಶಿಕ್ಷಕರುಗಳ ವೇದಘೋಷದಿಂದ ಆರಂಭಗೊಂಡಿತು. ವಿಶ್ವಭಾರತೀ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿನಿಯರು ಪ್ರಾರ್ಥನೆ ಮಾಡಿದರು. ಶ್ರೀ ಗಣೇಶ ಜ್ಯೋತಿಷ್ಯ ಸಂಸ್ಕೃತ ಪಾಠಶಾಲಾ ಶಿಕ್ಷಕರಾದ ವಿದ್ವಾನ್ ವಿ.ಎಲ್. ಹೆಗಡೆಯವರು ಸ್ವಾಗತಿಸಿದರು. ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ಶ್ರೀ ಅರಮನೆ ಜಪದಕಟ್ಟೆ ಮಠದ ಶ್ರೀ ಪ.ಬ್ರ. ಡಾ. ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳವರು ಹಾಗೂ ಗಣ್ಯರು ದೀಪಜ್ವಾಲನೆಯನ್ನು ಮಾಡುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಮೈಸೂರು ವಿಭಾಗ ಸಂಸ್ಕೃತ ಪಾಠಶಾಲಾ ಶಿಕ್ಷಕರುಗಳ ಸಂಘದ ಅಧ್ಯಕ್ಷರಾದ ವಿದ್ವಾನ್ ಎಂ. ಶಿವಮೂರ್ತಿಯವರು ಪ್ರಾಸ್ತಾವಿಕ ಭಾಷಣ ಮಾಡುತ್ತಾ, ಸಂಘದ ಚಟುವಟಿಕೆಗಳು ಮತ್ತು ಸಂಸ್ಕೃತ ಭಾಷೆಯ ಬೆಳವಣಿಗೆ, ಪ್ರಚಾರ, ಪ್ರೋತ್ಸಾಹಪೂರ್ವಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ವಿಚಾರವನ್ನು ಸಭೆಯಲ್ಲಿ ಪ್ರಸ್ತಾಪಿಸಿದರು.

ಮುಖ್ಯ ಅತಿಥಿಗಳಾದ ವಿಧಾನ ಪರಿಷತ್ ಸದಸ್ಯರಾದ ಸನ್ಮಾನ್ಯ ಶ್ರೀ ತೋಂಟದಾರ್ಯರವರು, ಮೈಸೂರು ವಿಭಾಗದ ಸಂಸ್ಕೃತ ವಿಷಯ ಪರಿವೀಕ್ಷಕರಾಗಿ ಕಾರ್ಯನಿರ್ವಹಿಸಿ ಇದೇ ತಿಂಗಳು ನಿವೃತ್ತರಾದ ವಿದ್ವಾನ್ ಕೆ. ಗಂಗಣ್ಣನವರನ್ನು ಹಾಗೂ ವಿವಿಧ ಸಂಸ್ಕೃತ ಪಾಠಶಾಲೆಗಳಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದ ಶಿಕ್ಷಕರುಗಳನ್ನು ಸನ್ಮಾನಿಸಿದರು.

2010-11ರ ಶೈಕ್ಷಣಿಕ ವರ್ಷದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ನಡೆಸಿದ ಸಂಸ್ಕೃತ ಪ್ರಥಮಾ, ಕಾವ್ಯ, ಸಾಹಿತ್ಯ ಪ್ರಸಿದ್ಧ ಪರೀಕ್ಷೆಗಳಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಚಂದ್ರಮೌಳಿ ಎಸ್. ನಾಯ್ಕರ ಅವರು ಸಂಸ್ಕೃತೋತ್ಸವ ಆಚರಣೆಯ ವಿಷಯವನ್ನು ಕುರಿತು "ಸಂಸ್ಕೃತ ಸರ್ವರ ಭಾಷೆಯಾಗಬೇಕು, ಈ ಭಾಷೆಯ ಸವಿಯನ್ನು ಸರ್ವರು ಸವಿಯುವಂತಾಗಬೇಕು, ಸಂಸ್ಕೃತ ಮತ್ತು



ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮ

ಸಂಸ್ಕೃತಿಯ ಪ್ರಚಾರ ಕಾರ್ಯಗಳು ಹೆಚ್ಚು ಹೆಚ್ಚು ಆಗಬೇಕಿದೆ, ಅಧ್ಯಯನ-ಅಧ್ಯಾಪನಗಳ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ನಮ್ಮ-ನಿಮ್ಮೆಲ್ಲರ ಕರ್ತವ್ಯವಾಗಿದೆ" ಎಂದು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿದರು.

ವಿವಿಧ ಪಾಠಶಾಲಾ ವಿದ್ಯಾರ್ಥಿಗಳು ಸಂಸ್ಕೃತ ನಾಟಕ, ಸಮೂಹಗಾನ, ದೇಶಭಕ್ತಿಗೀತೆ, ನೃತ್ಯಗಳನ್ನು ಪ್ರದರ್ಶಿಸುವುದರ ಮೂಲಕ ಸಭಿಕರನ್ನು ರಂಜಿಸಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಪ್ರೊ. ಎನ್. ಅಶ್ವತ್ಥಮ್ಮರವರು, ಆದಿಚುಂಚನಗಿರಿ ಸಂಸ್ಕೃತ ಮಹಾವಿದ್ಯಾಲಯದ ಪ್ರಾಂಶುಪಾಲರಾದ ವಿದ್ವಾನ್ ಸಿ. ನಂಜುಂಡಯ್ಯನವರು, ಕರ್ನಾಟಕ ರಾಜ್ಯ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ವಿದ್ವಾನ್ ಚಂದ್ರಶೇಖರಯ್ಯನವರು ಹಾಗೂ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ನಾಲ್ಕು ವಲಯಗಳ ಸಂಘದ ಅಧ್ಯಕ್ಷರುಗಳು ಮತ್ತು ಕೆಲವು ಜಿಲ್ಲಾ ಅಧ್ಯಕ್ಷರುಗಳು ಸಮಾರಂಭದಲ್ಲಿ ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಶೋಭೆ ತಂದುಕೊಟ್ಟರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಶ್ರೀ ಅರಮನೆ ಜಪದಕಟ್ಟೆ ಮಠದ ಶ್ರೀ ಪ.ಬ್ರ. ಡಾ. ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳವರು ಆಶೀರ್ವಚನದಲ್ಲಿ ಮೈಸೂರು ವಿಭಾಗದ ಸಂಸ್ಕೃತ ಪಾಠಶಾಲಾ ಶಿಕ್ಷಕರು ಆಯೋಜಿಸಿರುವ ಈ ಕಾರ್ಯಕ್ರಮ ತುಂಬಾ ಶ್ಲಾಘನೀಯ ಎಂದು ತಿಳಿಸುತ್ತಾ ಪದಾಧಿಕಾರಿಗಳನ್ನು ಆಶೀರ್ವದಿಸಿದರು.

ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿಗಳಾದ ವಿದ್ವಾನ್ ಎಚ್.ಎಸ್. ಶ್ರೀಕಂಠಮೂರ್ತಿಯವರು ವಂದನಾರ್ಪಣೆ ಮಾಡಿದರು. ಶ್ರೀಮತಿ ಸುಧಾರವರು ಕಾರ್ಯಕ್ರಮವನ್ನು ನಿರೂಪಿಸಿದರು. ಐಕ್ಯಮಂತ್ರದೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

# ಶ್ರೀ ಆದಿಚುಂಚನಗಿರಿಯಲ್ಲಿ ಸಂಸ್ಕೃತ ಉಪನ್ಯಾಸ

ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿರುವ ಬಿ.ಜಿ.ಎಸ್. ಆಧ್ಯಾತ್ಮಿಕ ಸಭಾ ಭವನದಲ್ಲಿ ಶ್ರೀ ಕ್ಷೇತ್ರಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಪದ್ಮಭೂಷಣ ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರ ನಾಥ ಮಹಾಸ್ವಾಮೀಜಿಯವರ ಕೃಪಾಶೀರ್ವಾದಗಳೊಂದಿಗೆ 'ಮೃಚ್ಛಕಟಿಕಂ–ಸಂಶೋಧನಂ ಚ' ಎಂಬ ವಿಷಯದ ಬಗ್ಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾದ ಡಾ. ಎಚ್.ವಿ. ನಾಗರಾಜರಾವ್ ಅವರಿಂದ ವಿಶೇಷ ಉಪನ್ಯಾಸವನ್ನು ಶ್ರೀಕ್ಷೇತ್ರದ ಕಾರ್ಯದರ್ಶಿಗಳಾದ ಪರಮಪೂಜ್ಯ ಶ್ರೀ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿತ್ತು.

ಮೊದಲಿಗೆ ಶ್ರೀಕ್ಷೇತ್ರದ ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದ ವಿದ್ವತ್ ವಿದ್ಯಾರ್ಥಿಗಳಾದ ಧನಂಜಯ ಸಂಗಡಿಗರು ವೇದಘೋಷ ಮಾಡಿದರು. ಶ್ರೀ ಪಿ. ಚಂದ್ರಶೇಖರ್‌ರವರು ಪ್ರಾರ್ಥನೆಯಾದ ನಂತರ ಪ್ರಾಚಾರ್ಯರಾದ ಪ್ರೊ. ಸಿ. ನಂಜುಂಡಯ್ಯರವರು ಪ್ರಾಸ್ತಾವಿಕ ಮಾತುಗಳನ್ನಾಡುತ್ತಾ, ಶ್ರೀಕ್ಷೇತ್ರ ಆದಿಚುಂಚನಗಿರಿಯಲ್ಲಿ ಸಂಸ್ಕೃತ ವೇದ ಆಗಮ ಶಿಕ್ಷಣಕ್ಕೆ ನೀಡಿರುವ ವಿಶೇಷ ವ್ಯವಸ್ಥೆಯ ಬಗ್ಗೆ ಹಾಗೂ ಶ್ರೀಕ್ಷೇತ್ರದಲ್ಲಿ ಸಂಶೋಧನಾ ಕೇಂದ್ರವನ್ನು ತೆರೆದು ಸಂಶೋಧನೆ ಮಾಡುವವರಿಗೆ ಎಲ್ಲಾ ರೀತಿಯ ಅನುಕೂಲ ಮಾಡಿಕೊಡುವ ಸದುದ್ದೇಶವಿದೆ ಎಂದು ತಿಳಿಸಿದರು.

ವಿಶೇಷ ಉಪನ್ಯಾಸ ನೀಡಿದ ಖ್ಯಾತ ಸಂಸ್ಕೃತ ವಿದ್ವಾಂಸರಾದ ಡಾ. ಎಚ್.ವಿ. ನಾಗರಾಜರಾವ್‌ರವರು ಮಾತನಾಡಿ "ಜಗದ್ಗುರು ಮಹಾಸನ್ನಿಧಿಯವರು ಆದಿಚುಂಚನಗಿರಿಯಲ್ಲಿ ಕೈಲಾಸವನ್ನೇ ಸೃಷ್ಟಿ ಮಾಡಿದ್ದಾರೆ. ಇಲ್ಲಿ ನಡೆದಿರುವ ಅದ್ಭುತವನ್ನು ಕಂಡು ನನಗೆ ತುಂಬಾ ಸಂತೋಷವಾಗಿದೆ ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ರಾಜ್ಯದ ಸಂಸ್ಕೃತ ಶಾಲಾ ಕಾಲೇಜುಗಳನ್ನು ಪರಿವರ್ತನೆ ಮಾಡುವ ಪರ್ವ ಪ್ರಾರಂಭವಾಗಿದೆ. ಅದಕ್ಕೆ ಪೂರಕ ವಾದಂತಹ ಕಾರ್ಯಕ್ರಮ ಶ್ರೀಕ್ಷೇತ್ರ ಆದಿಚುಂಚನಗಿರಿಯಲ್ಲಿ ನಡೆಯುತ್ತಿದೆ" ಎಂದರು.

ಶ್ರೀ ಆದಿಚುಂಚನಗಿರಿ ಶ್ರೀಗಳವರು ಎಲ್ಲಾ ವರ್ಗದವರಿಗೂ ಸಂಸ್ಕೃತ ವೇದಾಗಮ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿದ್ದಾಗ್ಯೂ ನಾವು ಮಾಡುವ ಕರ್ತವ್ಯಗಳು ಏನೆಂಬುದನ್ನು ಅರಿಯಬೇಕು ಎಂದರು. ಪ್ರಾಚೀನ ಗ್ರಂಥಗಳ ಶುದ್ಧೀಕರಣ ನಡೆಯಬೇಕು, ಲಿಪಿಗಳ ಜ್ಞಾನ ಆವಶ್ಯಕ, ದೊಡ್ಡವರು ಹೇಳಿದೆಂದೇ



**ಆದಿಚುಂಚನಗಿರಿಯಲ್ಲಿ ಡಾ. ಎಚ್.ವಿ. ನಾಗರಾಜರಾವ್ ಅವರಿಂದ ವಿಶೇಷ ಉಪನ್ಯಾಸ.**

ಒಪ್ಪಬೇಕೆಂದಿಲ್ಲ, ಪರೀಕ್ಷಿಸಿ ಒಪ್ಪುವುದು ಒಳಿತು ಎಂದು ಹೇಳಿದ್ದಾನೆ ಬುದ್ಧ. ಅದಕ್ಕಾಗಿ ಎಲ್ಲರೂ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ಶ್ರೀಕ್ಷೇತ್ರದ ವಿದ್ವಾಂಸರುಗಳಿಗೆ ತಿಳಿಹೇಳಿದರು. ಶುದ್ಧ ಉಚ್ಚಾರಣೆಗೆ ಮತ್ತು ಭಾಷಾಸ್ವರೂಪಕ್ಕೆ ಈ ಭಾಷೆಯ ಅಧ್ಯಯನದ ಆವಶ್ಯಕತೆ ಇದೆ ಎಂದು ವಿವರಿಸಿ ಹೇಳಿದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದ ಶ್ರೀಕ್ಷೇತ್ರದ ಕಾರ್ಯದರ್ಶಿಗಳಾದ ಪೂಜ್ಯ ಶ್ರೀ ಶ್ರೀ ನಿರ್ಮಲಾನಂದನಾಥ ಸ್ವಾಮಿಗಳವರು ಮಾತನಾಡಿ, ವಿದ್ವಾಂಸರಾದ ಎಚ್.ವಿ. ನಾಗರಾಜರಾವ್‌ರವರು ನಮ್ಮ ಸಂಸ್ಕೃತ ಮಹಾವಿದ್ಯಾಲಯಕ್ಕೂ ಸಂದರ್ಶಕ ಪ್ರಾಧ್ಯಾಪಕರಾಗಿ ಬರಬೇಕೆಂದು ಆಶಿಸಿದರಲ್ಲದೆ, ಮೌನಕ್ಕಿಂತಲೂ ಬೆಲೆಯುಳ್ಳ ಮಾತನಾಡಬೇಕು. ಗುರುಹಿರಿಯರಲ್ಲಿ ಗೌರವ ಮುಖ್ಯ ಎಂದರಲ್ಲದೆ ಮಾತೃ ಸ್ಥಾನದಲ್ಲಿರುವ ಸಂಸ್ಕೃತ ಭಾಷೆಯನ್ನು ಕಲಿತು ಸುಸಂಸ್ಕೃತರಾಗುವಂತಹ ಅವಕಾಶ ಶ್ರೀಕ್ಷೇತ್ರದಲ್ಲಿದೆ. ಇದನ್ನು ಎಲ್ಲರೂ ಬಳಸಿಕೊಳ್ಳಬೇಕೆಂದು ಹೇಳಿದರು. ವಿದ್ವಾನ್ ಶ್ರೀ ಕೃಷ್ಣಮೂರ್ತಿ ಜಿ. ಕೂರ್ಸೆರವರು ಸ್ವಾಗತಿಸಿದರು.

ವಿದ್ವಾನ್ ಶ್ರೀ ಎಚ್.ಎಂ. ನರಸಿಂಹಮೂರ್ತಿ ವಂದನಾರ್ಪಣೆ ಮಾಡಿದರು. ವಿದ್ವಾನ್ ಶ್ರೀಕಾಂತ ಪುರೋಹಿತ್ ಕಾರ್ಯಕ್ರಮ ನಿರೂಪಿಸಿದರು.

ಈ ಕಾರ್ಯಕ್ರಮದಲ್ಲಿ ನೂರಾರು ಮಂದಿ ವಿದ್ವತ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಅಧ್ಯಾಪಕರು, ವಿದ್ವಾಂಸರು ಭಾಗವಹಿಸಿದ್ದರು.

# ಸಂಸ್ಕೃತ ಪಾಠಶಾಲಾ/ಕಾಲೇಜುಗಳ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳು

ಮೈಸೂರು–ಚಾಮರಾಜನಗರ ಜಿಲ್ಲಾ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳಿಗೆ ಮೈಸೂರು ವಲಯಮಟ್ಟದ ವಿವಿಧ ಸ್ಪರ್ಧೆಗಳನ್ನು ದಿನಾಂಕ: 17.12.2011ರಂದು ಮೈಸೂರಿನ ಸರ್ಕಾರಿ ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ ಆಯೋಜಿಸಲಾಗಿತ್ತು.

ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲರಾದ ಡಾ. ಭಾಷ್ಯಂ ಸ್ವಾಮೀಜಿಯವರು ಬಹುಮಾನ ಮತ್ತು ಪ್ರಶಸ್ತಿಪತ್ರವನ್ನು ವಿತರಿಸಿದರು.

ಸಭೆಯಲ್ಲಿ ಶ್ರೀ ಫಲಾಹಾರಪ್ರಭುಸ್ವಾಮಿ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಪರಮಪೂಜ್ಯ ಫಲಾಹಾರಪ್ರಭುಸ್ವಾಮಿಗಳು, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಕೇಂದ್ರ ಸಂಯೋಜಕರಾದ ವಿದ್ವಾನ್ ಟಿ.ಸಿ. ಅಶ್ವತ್ಥಕುಮಾರ್, ಮೈಸೂರು ವಲಯ ಸಂಯೋಜಕರಾದ ವಿದ್ವಾನ್ ಎಂ. ಶಿವಮೂರ್ತಿ ಉಪಸ್ಥಿತರಿದ್ದರು.



ಸಂಸ್ಕೃತ ಸ್ಪರ್ಧಾ ಕಾರ್ಯಕ್ರಮದಲ್ಲಿ ವಿಜೇತರಾದ ವಿದ್ಯಾರ್ಥಿಗಳು.

